ಮಹಾರಾತ್ರಿ

ಕುವೆಂಪು



ಉದಯರವಿ ಪ್ರಕಾಶನ

ವಾಣೀವಿಲಾಸಪುರಂ, ಮೈಸೂರು-೨

ಸಿದ್ಧಾರ್ಥ—(ಆಜ್ಞಾವಾಣಿಯಿಂದ)
ನಿಲ್ಲು, ಚನ್ನ, ನಿಲ್ಲು! ಗುಟ್ಟಾದ ಪಯಣವಿದು.
ಗುಟ್ಟಾದ ಪಯಣ! (ಸ್ವಗತ) ಬಡಪಾಯಿ ಚನ್ನಜ್ಜ,
ಮುಗ್ಧ ಚನ್ನಜ್ಜ, ನನ್ನ ಮನವನ್ನರಿಯ, (ಗಟ್ಟಿಯಾಗಿ)
ಕೇಳಿಲ್ಲಿ, ಚನ್ನಜ್ಜ, ಕೇಳಿಲ್ಲಿ: ನಿನಗೆಲ್ಲ
ವಿಶದವಾಗುಸುರುವೆನು. ಆ ದಿನದ ನೆನಪಿದೆಯೆ?

ಚನ್ನ— ಯಾವ ದಿನ?

ಸಿದ್ಧಾರ್ಥ—(ಭಾವದಿಂದ) ಮುದುಕನೊಬ್ಬನ ಕಂಡ ಪುಣ್ಯದಿನ!
ರೋಗಿಯನು ಕಂಡ ದಿನ! ಸತ್ತವನ ಕಂಡ ದಿನ!
ಯೋಗೀಶನೊಬ್ಬನನು ಕಂಡತುಳ ಪುಣ್ಯದಿನ!
ಆ ದಿನದ ನೆನಪಿದೆಯೆ ನಿನಗೆ?

ಚನ್ನ— ಹೌದೊಡೆಯ.

ಸಿದ್ಧಾರ್ಥ—ಅಂದಿನಿಂದಲು ತಾನು ಬುದ್ಧನೆಂದಾಗುವೆನೊ
ಜಗವನೆಂದುಳುಹುವೆನೊ ಎಂದು ಹಂಬಲಿಸು
ತಿರುವೆ.

ಚನ್ನ— (ಸ್ವಗತ) ಜಾತಕದ ಜೋಯಿಸನು ಅಂತೆಯೇ
ನುಡಿದಿದ್ದ.

ಸಿದ್ಧಾರ್ಥ— ರಾಜ್ಯವನ್ನಗಲುವಾ ದಿನವೇ
ಮದುವೆ ಬಂದೆನ್ನ ನಿಲ್ಲಿಸಿತು.

ಚನ್ನ— ಇಂದು ಸುತನುದಯ
ನಿಲ್ಲಿಸದೆ?

ಸಿದ್ಧಾರ್ಥ— ಇಲ್ಲ, ಎಂದೂ ಇಲ್ಲ. ಚನ್ನ,
ಇಂದು ಜನ ಬಂದರೂ ತಡೆಯಲಾರನು ಎನ್ನ.
ಕೇಳದಿರು ಪ್ರಶ್ನೆಯನು. ಇಷ್ಟು ದಿನ ನಿನ್ನ ನಾ
ಸಲಹಿದೆನು. ನೀನು ಇಂದಿನೊಂದಿರುಳಲ್ಲಿ
ಸಲಹಲಾರೆಯ ಎನ್ನ?

ಚನ್ನ— ನಿನ್ನ ಪ್ರೇಮಕೆ ಸೋತೆ,
ಸಿದ್ಧಾರ್ಥ; ಹೇಳು. ನಾನೂರ್ನುಡಿಯ ನುಡಿಯದೆಯೆ
ಮಾಡುವೆನು.

ಸಿದ್ಧಾರ್ಥ—ಬಹಳ ಬಳಲಿಹೆ ನೀನು. ನನ್ನಾಜ್ಞೆ!
ಹೋಗು ಮಲಗಿಕೊ. (ಹೋಗುವವನನ್ನು ಕುರಿತು)
ಇರು ಸ್ವಲ್ಪ, ಕೈಲಾಸ.
ಕೈಲಾಸ—(ಹಿಂತಿರುಗಿ)ಅಪ್ಪಣೆ.
ಸಿದ್ಧಾರ್ಥ— ನಿನಗೆಷ್ಟು ವಯಸೀಗ?
ಕೈಲಾಸ— ತಮ್ಮ
ತಂದೆ ಪಟ್ಟಕ್ಕೆ ಬಂದಾಗ ನನಗೆಂಟು
ತುಂಬಿತ್ತು.
ಸಿದ್ಧಾರ್ಥ—(ಮುಗುಳುನಗೆಯಿಂದ) ನೀನು ಬಹು ಬಡವನಲ್ಲವೆ ಪಹರಿ?
ಕೈಲಾಸ—ತಮ್ಮ . . . . ಕೃಪೆಯಿಂದ . . . .
ಸಿದ್ಧಾರ್ಥ— ಇರಲಿ ಬಿಡು. ಬಾ ಇಲ್ಲಿ.
ತೊಡವುಗಳು ಬೇಕೇನು ನಿನಗೆ? ದುರುದುರುನೆ
ನೋಡುತಿಹೆ ಏಕೆ? ಬೇಕೇನು? ಹೇಳು!
ಕೈಲಾಸ—ಇಂದು ಒಡೆಯರ ರೀತಿ ಬೇರೆಯಾಗಿಹುದೆಂದು
ಸೋಜಿಗವು ಎನಗೆ.
ಸಿದ್ಧಾರ್ಥ— ಸೋಜಿಗವ ಪಡಬೇಡ,
ಪಹರಿ! ತೆಗೆದುಕೋ. (ತನ್ನ ಆಭರಣಗಳನ್ನು ಕೊಡುತ್ತಾನೆ.)
ಕೈಲಾಸ—(ಹಿಂಜರಿದು) ನನಗೇಕೆ, ನನ್ನೊಡೆಯ,
ಆ ರನ್ನದೊಡವೆಗಳು; ರಾಜರೇನೆಂದಾರು?
ಸಿದ್ಧಾರ್ಥ—ನಾನಿತ್ತೆನೆನು, ಪಹರಿ. ನಾನಿತ್ತೆನೆಂದರುಹು!
ಭಯವೇಕೆ ತೆಗೆದುಕೊ. ಈ ರಾತ್ರಿ ನಿನ್ನ ಮನ
ದೊಳು ಚಿರಸ್ಮರಣೀಯವಾಗಿರಲಿ! (ಕೊಡುತ್ತಾನೆ.)
ಕೈಲುಸ—(ತೆಗೆದುಕೊಂಡು) ನನ್ನೊಡೆಯ!
ಸಿದ್ಧಾರ್ಥ—ನಿನ್ನೊಡವೆ! (ಮರಳಿ ಮತ್ತೊಂದು ಕೊಡುತ್ತಾನೆ.)
ಕೈಲಾಸ—(ತೆಗೆದುಕೊಂಡು) ನನ್ನೊಡೆಯ!
ಸಿದ್ಧಾರ್ಥ— ನಿನ್ನೊಡವೆ! ತೆಗೆದುಕೊ;
ಮಲಗಿಕೊ, ಹೋಗು, ನನ್ನಿಷ್ಟ.
ಕೈಲಾಸ— ನನ್ನೊಡೆಯ!

(ಅಡ್ಡ ಬಿದ್ದು ಹೋಗುತ್ತಾ ಆತ್ಮಗತ)
ಮುಂದೆ ಏನಾಗುವುದೊ ದೇವರೇ ಬಲ್ಲ.

ಸಿದ್ಧಾರ್ಥ—(ಬಾಗಿಲು ಹಾಕಿ)
ಹೊತ್ತಾಯ್ತು, ಕಾಲಚಕ್ರವೆ, ತಿರುಗು ಮೆಲ್ಲನೆಯೆ
ಇಂದೊಂದು ದಿನ. ಚನ್ನನೆಚ್ಚತ್ತಿಹನೊ? ಇಲ್ಲವೊ?
(ಮತ್ತೊಂದು ಬಾಗಿಲು ತೆರೆದು)
ಎಂತು ಮಲಗಿಹನು! ನಿದ್ದೆಯವನನು ಶಾಂತಿ
ಸಾಗರದೊಳದ್ದಿಹಳು. ಎಲೆ ನಿದ್ದೆ, ಎನಿತು ಮೃದು
ಮಧುರಳೌ ನೀನು. ಸಮತೆಯಿಾಯುವೆ ಜಗದ
ಜೀವಿಗಳಿಗೆಲ್ಲ. ನಿನ್ನ ಗಾಢಾಲಿಂಗ-
ನದೊಳೆಲ್ಲರೂ ಒಂದೆ. ನಿಷ್ಪಕ್ಷಪಾತಳೌ
ನೀನು. ಬಡಕೂಲಿಯಾದೊಡೆಯು, ಮೇಣರಸ-
ನಾದೊಡೆಯು ಭೇದ ತೋರದೆ ನೀನು ಮುತ್ತಿಡುವೆ.
ಯೋಗಿಯಾದರು ಅಥವ ತಲೆಬಡಿಗನಾದರೂ
ನಿನ್ನ ದಿಟ್ಟಿಯೊಳೆಲ್ಲರೊಂದೆ. ಜಗದೆನಿತು
ಬಳಲಿಕೆಯ, ಕೋಟಲೆಯ ನುಂಗುತಿಹೆ ನೀನು!

ಚನ್ನ— (ಕನವರಿಸಿ) ಬಂದೆ, ನನ್ನೊಡೆಯ. ಬೇಡ, ಬೇಡಾ! ಬೇಡ!

ಸಿದ್ಧಾರ್ಥ—ಕನವರಿಸುತಿಹನು. (ಮೆಲ್ಲಗೆ) ಚನ್ನಜ್ಜ ಚನ್ನಜ್ಜ!!
ಎಲೆ ನಿದ್ದೆ, ನಿನ್ನ ಕಡಲೆನಿತಾಳವಿಹುದು?
(ಮೈಮುಟ್ಟಿ) ಚನ್ನಜ್ಜ! ಚನ್ನಜ್ಜಾ!

ಚನ್ನ— (ಗಾಬರಿಯಿಂದ) ಅಯ್ಯಯ್ಯೊ! ಅಯ್ಯಯ್ಯೊ!
ಏನು ನನ್ನೊಡೆಯ! (ಎದ್ದು ಕಣ್ಣುಜ್ಜಿಕೊಂಡು ಸುತ್ತಲೂ ನೋಡಿ ಸಿದ್ಧಾರ್ಥನನ್ನು ನೋಡುವನು.)

ಸಿದ್ಧಾರ್ಥ— ಬೆದರದಿರು; ನಾನು,
ಸಿದ್ಧಾರ್ಥ.

ಚನ್ನ— ಏನು ನನ್ನೊಡೆಯ?

ಸಿದ್ಧಾರ್ಥ— ಒಳಗೆ ಬಾ.
ಕನಸು ಕಂಡೆಯ ಏನು?

ಚನ್ನ— (ಒಳಗೆ ಬಂದು) ಏನು ಕನಸಪ್ಪಾ!
ದುಃಸ್ವಪ್ನ, ನನ್ನೊಡೆಯ!
ಸಿದ್ಧಾರ್ಥ— ಏನು ಕನಸದು, ಚನ್ನ?
ಚನ್ನ— ನಾಲಗೆಯೆ ಬಾರದೆನಗಷ್ಟು ದುಃಸ್ವಪ್ನ!
ಸಿದ್ಧಾರ್ಥ—ಹೇಳಬಾರದೆ ಎನಗೆ?
ಚನ್ನ— ಹೇಳಬಾರದ ಸ್ವಪ್ನ!
ಕೇಳಬಾರದ ಸ್ವಪ್ನ!
ಸಿದ್ಧಾರ್ಥ— ಇರಲಿ ಬಿಡು. ಹೋಗಿ
ಕಡಿವಾಣ ಹಾಕದೇ ಕಂಥಕನ ಕರೆದು ತಾ.
ಜತೆಗೆ ಇನ್ನೊಂದು ಹಯವನ್ನು ತಾ.
ಚನ್ನ— ಏತಕ್ಕೆ?
ಸಿದ್ಧಾರ್ಥ—ಆಗಲೇ ಮರೆತೆಯಾ, ಬೈಗಿನಲ್ಲಂದದ್ದು?
ಚನ್ನ— ಏನದು?
ಸಿದ್ಧಾರ್ಥ—(ಸ್ವಗತ) ಸ್ಮೃತಿ ಕೂಡ ನರೆನವಿರ ಕಂಡೊಡನೆ
ದೂರಾಗುವುದು ಹೇಸಿ. (ಅವನ ತಲೆ ಹಿಡಿದು ಮೆಲ್ಲನೆ ಅಲುಗಿಸಿ)
ಉದುರುದುರು ನೆನಪೆ!
ಈಗ ನೆನಪಾಯ್ತೆ? (ಮುಗಳ್ನಗೆ)
ಚನ್ನ— ಆಯ್ತಾಯ್ತು.
ಸಿದ್ಧಾರ್ಥ— ನಡೆ ಬೇಗ.
ಅರಮನೆಯ ಪಶ್ಚಿಮದ್ವಾರದೊಳು ಕಾಯುತಿರು.
ಬರುವೆನಲ್ಲಿಗೆ ಬೇಗ.
ಚನ್ನ— (ಕೈಮುಗಿದು) ಅಪ್ಪಣೆ, ನನ್ನೊಡೆಯ.
(ಹೋಗುತ್ತಾನೆ.)
ಸಿದ್ಧಾರ್ಥ—(ದೀಪದ ಬಳಿಸಂದು)
ಬಾ, ಬೆಳಕೆ, ಬಾ ಬೇಗ. ನೀನು ಹೊರಗಿನ ಬೆಳಕು;
ಜ್ಞಾನ ಒಳಗಿನ ಬೆಳಕು. ನೀನಡಿಗಳಿಗೆ ದಾರಿ
ತೋರಿಸುವೆ. ಅರಿವಾದರಾತ್ಮನನು ಕೈಹಿಡಿದು
ನಡೆಸುವುದು. ಎಲೆಲೆ ಹೊರಗಿನ ಬೆಳಕೆ, ಒಳಗಿನಾ

ಬೆಳಕ ಪಡೆಯಲು ಹೋಗುತಿಹೆನು. ನೆರವಾಗು.
ಬಾ ಬೆಳಕೆ, ಬಾ ಬೇಗ. (ದೀಪವಿಡಿದು ಬಾಗಿಲಬಳಿಸಂದು)
ಕಡೆಯ ವಂದನೆ ನಿನಗೆ,
ಕೋಣೆಯೆ, ಕಡೆಯ ವಂದನೆ ನಿನಗೆ. ಸವಿಯಾದ
ನೆನಪುಗಳಿಗಾವಾಸವಾಗಿರುವೆ. ಕಡೆಯ ವಂದನೆ
ನಿನಗೆ, ಕೋಣೆಯೆ, ಕಡೆಯ ವಂದನೆ ನಿನಗೆ.
(ಹೋಗಿ ಮತ್ತೆ ಬಂದು)
ಪತ್ರವನು ಬರೆದಿಟ್ಟು ಹೋಗುವೆನು. ನನ್ನಿಂದ
ಅವರಿಗೇಕುಬ್ಬೇಗ? (ಪತ್ರ ಬರೆದಿಟ್ಟು ದೀಪ ತೆಗೆದುಕೊಂಡು)
ನಡೆಸೆನ್ನ ಬೆಳಕೇ, ನಡೆಸು. ಬೆಳಬೆಳಗಿ ಮುಂದೆ
ಅಡಿಯಿಡಿಸು. ನಂಬಿಹೆನು; ಋಜುಮಾರ್ಗವನೆ ಹಿಡಿಸು!

(ತೆರಳುತ್ತಾನೆ.)

ಪರದೆ.

ದೃಶ್ಯ ೩

[ಕುದುರೆ ಲಾಯದ ಬಳಿ. ಚೆನ್ನನು ಬರುತ್ತಾನೆ.]

ಚನ್ನ— ನಾನರಿಯೆ, ನಾನರಿಯೆ, ಇಂದು ಕಡೆಗೇನಾಗುವುದೊ
ಎಂದು. ಅವನಿಂದು ಬರಿಯ ಹುಚ್ಚನಂತಿಹನು.
ಅವನ ಆಣತಿಯನೆಸಗಬೇಕೋ
ಬೇಡವೋ ನಾನರಿಯೆ. ಒಡೆಯನೀ ಪರಿ ಹುಚ್ಚ
ನಾದೊಡೆ ವಿಧೇಯನಾಗಿರಬೇಕೆ? ಅವಿಧೇಯತೆಯೆ
ಅವನ ಭಾಗಕ್ಕೆ ಶುಭವಾಗಬಹುದು;
ಶುಭವಾಗಬಹುದು! ಇರಲಿ, ರಾಲನ ಕರೆವೆ!
(ಬಾಗಿಲ ಬಳಿ ಹೋಗಿ) ರಾಲ! ಏ ರಾಲ! ಏ ರಾಲ! ಏ ರಾಲಾ!
ಕಾಸ್ತಾರರಿವರೂ ಕುದುರೆಗಳೆ! (ಬಾಗಿಲು ತಟ್ಟಿ)
ಏ ರಾಲಾ!
ಏನು ಚಳಿಯಪ್ಪಾ! ಮೈಯೆಲ್ಲಾ ಕೊರೆಯುತಿದೆ.

ರಾಲ— (ಬಂದು) ಯಾರದು? ಈ ರಾತ್ರಿ ಕರೆವವರು?

ಚನ್ನ— ನಾನು!
ಏನು ನಿದ್ದೆಯೊ ನಿನಗೆ! ಊರೆಲ್ಲ ಬೆಂದರೂ
ನೀವುಟ್ಟಿಗೇಳೆ!

ರಾಲ— ನಾವೇನು ಮಾನುಗಳೆ,
ಕಣ್ಮುಚ್ಚದಾವಾಗಲೂ ನಿಮ್ಮ ಕಾಯುತ್ತ
ಕುಳಿತಿರುವುದಕ್ಕೆ?

ಚನ್ನ— ಮಾತಿರಲಿ, ಬಾ ಇಲ್ಲಿ,
ನಿನ್ನಿಂದ ಈಗೊಂದು ಬಹು ದೊಡ್ಡ ಕಾರ್ಯಸಾ–
ಧನೆಯಾಗಬೇಕು.

ರಾಲ— (ದೊಡ್ಡದಾಗಿ ಕಣ್ಣು ತೆರೆದು) ಏನಪ್ಪಾ!

ಚನ್ನ— ಮಾಡುವೆಯೊ
ಹೇಳು!

ಮಹಾರಾತ್ರಿ

ಕುವೆಂಪು

ಉದಯರವಿ ಪ್ರಕಾಶನ
ವಾಣೀವಿಲಾಸಪುರಂ, ಮೈಸೂರು-೨

ಮೊದಲನೆಯ ಮುದ್ರಣ ೧೯೪೧
ಉದಯರವಿ ಪ್ರಕಾಶನದಿಂದ ಪರಿಷ್ಕೃತವಾದ ಮೊದಲನೆಯ ಮುದ್ರಣ ೧೯೬೩
ಎರಡನೆಯ ಮುದ್ರಣ ೧೯೬೭
ಮೂರನೆಯ ಮುದ್ರಣ ೧೯೭೩

ಬೆಲೆ: ರೂ. ೧.೫೦

ಮುದ್ರಕರು:
ಉಷಾ ಪ್ರೆಸ್, ಮೈಸೂರು-೧

ಮಹಾರಾತ್ರಿ

ಪಾತ್ರಗಳು

ಸಿದ್ಧಾರ್ಥ
ಚನ್ನ
ಮಾರ
ಕಿನ್ನರ
ಯಕ್ಷ
ಗಂಧರ್ವ
ಕೈಲಾಸ
ರಾಲ
ಭಿಕ್ಷುಕ
ಯಶೋಧರೆ, ದೂತಿಯರು
ಮೊದಲಾದವರು

ಕಪಿಲವಸ್ತುವಿಗೆಂತು ತೆರಳಿ ಮೊಗದೋರಲಿ?
ಶುದ್ಧೋದನನಿಗೆಂತು ಮೋರೆ ತೋರಿಸಲಿನ್ನು?
ಹಾ ವಿಧಿಯೆ, ಕೊರಳ ಕೊಯ್ದೆಯ ಎನ್ನ? (ಕೆಳಗೆ ನೋಡಿ)

ಸಿದ್ಧಾರ್ಥ,

ಸಾಯುವವಗೇತಕೀ ಒಡವೆಗಳು? ಎನ್ನೊಲವಿಗಿವು
ಹೊಣೆಯೆ? ತೊಲಗು ತೊಲಗಲೆ ಸಿರಿಯೆ!
[ಆಭರಣಗಳನ್ನು ಒದೆಯುತ್ತಾನೆ.] ತಪ್ಪಾಯ್ತು
ಮನ್ನಿಸೆನ್ನನು, ಒಡೆಯ. ನೀನಿತ್ತ ವಸ್ತುಗಳ
ಒದೆಯುವನು ಮೂಢ. (ಅವುಗಳನ್ನು ತೆಗೆದುಕೊಂಡು)
ಎಲೆ ರನ್ನದೊಡವೆಗಳೆ,
ಬೆಲೆಗಾಗಿ ನಿಮ್ಮ ನಾನೆಂದಿಗೂ ಮುಟ್ಟೆ;
ನನ್ನೊಡೆಯನೊಲವಿಂದ ಕೊಟ್ಟ ವರಗಳು ನೀವು!
ನೀವವನ ಸುಸ್ಮೃತಿಯ ಕಿಂಕರರು, ಬನ್ನಿ!
ಬಾ, ರಾಹುತ, ಬೇಗ ಕಪಿಲವಸ್ತುವ ಸೇರಿ,
ಸುದ್ದಿಯನು ಸಾರಿ, ಧನ್ಯರಾಗುವ ಬಾ.
(ಹಿಂತಿರುಗಿ ದಿಟ್ಟಿಸಿ ನೋಡಿ)
ಕಂಥಕನೆ, ನೀನೆ ಧನ್ಯನು, ನಿನ್ನದೇ ಪುಣ್ಯ!
ನಿನ್ನ ಜನ್ಮವನಿಂದು ಕರುಬುವನು ಚನ್ನ!
(ತೆರಳುತ್ತಾನೆ.)

ಪರದೆ

ದೃಶ್ಯ ೧೦

[ಅನುಮಾ ಹೊಳೆಯ ದಡ. ಸಿದ್ಧಾರ್ಥನ ಪ್ರವೇಶ.]

ಸಿದ್ಧಾರ್ಥ—ನಿಲ್ಲಿಲ್ಲಿ, ಕಂಥಕಾ, ನಿಲ್ಲಿಲ್ಲಿ! ಅನುಮಾ
ತರಂಗಿಣಿಯ ನಿರ್ಮಲ ಸುವಾರಿಗಳನೀಂಟು!
ವೈರಾಗ್ಯಯಜ್ಞಕ್ಕೆ ಬಲಿಯಾಗಲೆಂದುಳಿದ
ಕಡೆಯ ಸಂಗವು ನೀನು. ಸತಿಸುತರ ಮೋಹ ಬಂಧನ
ಕಠಿನ. ಕಷ್ಟವಾಯ್ತೆನಗದರ ಖಂಡಿಪುದು.
ಚನ್ನ ಸಂಗದ ಮೋಹ ಬಂಧನವೊ ಕಠಿನತರ!
ಎನಗದನು ಹರಿಯುವುದು ಕಷ್ಟತರವಾಯ್ತು!
ಕಂಥಕನ ಸಂಗವಿದು ಕಠಿನತಮ, ಮೇಣಿದನು
ಖಂಡಿಪುದು ಕಷ್ಟತಮ. ಅವರೆಲ್ಲ ಮಾನವರು,
ನೀನು ಪಶು, ಕಂಥಕಾ! ಅದಕಾಗಿ ಎನ್ನೆದೆ
ಕುದಿಯುತಿದೆ. ಹಿಂದೆಂದು, ಹಿಂದಾರು, ಎಂದೆಂದು
ಸಾಧಿಸದ ಸಾಹಸವನೆಸಗಿರುವೆ, ಕಂಥಕನೆ!
ಅದರಿಂದ ಧನ್ಯನಾಗಿಹೆ, ಹೋಗು, ಸೇರು
ಕಪಿಲವಸ್ತುವ ಬೇಗ. ಎನ್ನವರು ಬಂದು
ಕೇಳುವರು ನಿನ್ನ. ತಲೆದೂಗಿ ಸುಮ್ಮನಿರು—
ತಲೆಯನೇತಕೆ ತೂಗುತಿಹೆ ಇಂತು? ನೀನೆನ್ನ
ಅರಿಯುವೆಯಾ? ಹೋಗು, ಕಂಥಕ, ಹೋಗು.
ನೋಡಲ್ಲಿ!
ಪೂರ್ವದಿಗ್ವಧುವಿನೊಡಗೂಡಿ ಉಷೆ ನಲಿಯುವಳು!
ಹೋಗು, ಎಲ್ಲಿಯೂ ನಿಲ್ಲದೆಯೆ ಹೋಗು.
ನೀನು ಕಣ್ಮರೆಯಾಗುವಲ್ಲಿಪರಿಯಂತವೂ
ಕಣ್ದಣಿಯೆ ನೋಡುವೆನು! (ನೋಡುತ್ತಾ ನಿಂತು, ನಿಟ್ಟುಸಿರೆಳೆದು)
ಪಾಪ ಬಡಜಂತು!
ಏನ ಚಿಂತಿಸಿ ತೆರಳಿತೋ, ತಿಳಿಯೆ. ಬಾ ಉದಯ,
ಬಾ; ಇಳೆಗೆ ಬೆಳಕ ತಾ! (ತಿರುಗಿ) ಯಾರಿವನು ಮರಳಲ್ಲಿ?

ಬಾ ಇಲ್ಲಿ, ಸೋದರನೆ. (ತಿರುಕ ಬರುತ್ತಾನೆ.)
ಬಡವಸ್ತ್ರಗಳ ನೀಡು,
ಸಿರಿಯ ಕೇತನಗಳಿವು ತೆಗೆದುಕೋ; ನೋಡು!

ಭಿಕ್ಷುಕ— ಮಹಾತ್ಮಾ, ನೀನಾರು?

ಸಿದ್ಧಾರ್ಥ— ಅದನರಿಯೆ ಹೊರಟಿಹೆನು.

(ಬಟ್ಟೆಗಳನ್ನು ಬದಲಾಯಿಸುತ್ತಾರೆ.)

ನೀನೀಗ ರಾಜನಂತೆಸೆಯುತಿಹೆ, ಸೋದರನೆ.
ಬೇಡುವವರಲ್ಲೆನಿತು ರಾಜರುಗಳಿಲ್ಲ,
ರಾಜರಲ್ಲೆನಿತು ಭಿಕ್ಷುಕರಿಲ್ಲ! ಬೇಡುವವ
ರಲ್ಲೆನಿತು ನೀಡುವವರಿಲ್ಲ! ನೀಡುವವ
ರಲ್ಲೆನಿತು ಬೇಡುವವರಿಲ್ಲ! ತೆರಳು, ನಲಿ,
ಸೋದರನೆ. ನಿನ್ನ ನಲ್ಮೆಯೆ ನನ್ನ ನಲ್ಮೆ. (ತೆರಳುತ್ತಾನೆ.)

ಭಿಕ್ಷುಕ— ಶಿವನ ಬಟ್ಟೆಯನುಟ್ಟ ನೀನೆ ಧನ್ಯನು ಇಂದು,
ಸಿದ್ಧಾರ್ಥ! ಶಿವವಾದೆ ಮುಂದೆ ಎಂದೆಂದೂ!

(ಹೋಗುತ್ತಾನೆ.)

(ಪರದೆ)

ಉಪಸಂಹಾರ ದೃಶ್ಯ

[ಬಾಂದಳದ ನಡುವೆ, ಮುಗಿಲ ತೇರಿನಲ್ಲಿ ಯಕ್ಷ ಕಿನ್ನರ ಗಂಧರ್ವರು ಕುಳಿತಿದ್ದಾರೆ.]

ಗಂಧರ್ವ—ಏಳು, ಮೇಲೇಳು, ಎಲೆ ಮೇಘರಥವೇ!

ಕಿನ್ನರ— ದಾರಿ ಬಿಡು, ದಾರಿ ಬಿಡು, ಎಲೆ ವಾಯುಪಥವೆ!

ಯಕ್ಷ— ನಾವು ಮೇಲೇರುತಿರೆ, ರಮಣೀಯವಾಗುತ್ತ-
ಲಿಹುದು ತಿರೆ!

ಗಂಧರ್ವ— ಗಿರಿಶೃಂಗ ಹಳ್ಳಕೊಳ್ಳಗಳೆಲ್ಲ
ಸಮತೆಯನ್ನೈದುತಿವೆ!

ಕಿನ್ನರ— ಹಿಮಗಿರಿಗೆ! ಹಿಮಗಿರಿಗೆ!
ಎಲೆ ಮೇಘರಥವೇ!

ಯಕ್ಷ— ಕಳೆದ ರಾತ್ರಿಯ ತೆರದ
ರಾತ್ರಿಯನು ಕಂಡಿಲ್ಲ.

ಗಂಧರ್ವ— ಅದು ಮಹಾರಾತ್ರಿ!

ಕಿನ್ನರ— ನೋಡಲ್ಲಿ! ರವಿಯುದಯ, ಪೂರ್ವಗಿರಿ ಶಿಖರದೊಳ್!

ಯಕ್ಷ— ನೋಡಲ್ಲಿ! ಮತ್ತೊಂದು ರವಿಯುದಯವೆಸೆದಿಹುದು:
ಕತ್ತಲಂದದ ಕೂದಲನು ಕತ್ತರಿಸುತಿಹುದು
ಅನುಮಾ ನದಿಯ ತೀರದರೆಯಲ್ಲಿ! ಅಮಲತರ!

ಕಿನ್ನರ— ರವಿಯಿಬ್ಬರೊಂದುದಯ:
ಹಳೆಯ ಸೂರ್ಯನು ಉದಯಗಿರಿ ಶಿಖರದಲ್ಲಿ!
ಹೊಸ ನೇಸರ್ ಅನುಮಾತರಂಗಿಣಿಯ ತೀರದರೆಯಲ್ಲಿ!

ಗಂಧರ್ವ— ಹಳೆಯ ರವಿ
ದಿನಪ!

ಯಕ್ಷ— ಹೊಸ ರವಿಯು ಜನಪ! ನೋಡಲ್ಲಿ!
ಮರ್ತ್ಯನಯನಂಗಳಿಗೆ ಕಾಣದಿಹ ಅಧಿಕಾರ
ಮಕುಟವದು ಎಂತು ಶೋಭಿಪುದಲ್ಲಿ ಮೂಜಗದ
ಕತ್ತಲನ್ನೋಡಿಸುವ ತೆರದಿ.

ಗಂಧರ್ವ— ಸಿದ್ಧಾರ್ಥನ್

ಇನ್ನಾವಗಂ ಬುದ್ಧ !

ಕಿನ್ನರ— ಮುಂದಾಗುವನು ಸಿದ್ಧ !

ಯಕ್ಷ— ಹಿಮಗಿರಿ! ಹಿಮಗಿರಿ! ನಿಲ್ಲೆಲೈ ಮೇಘ !

ಗಂಧರ್ವ— ಬನ್ನಿ, ನಮ್ಮೂರ ಸೇರುವಂ ಬೇಗ.

ಕಿನ್ನರ— ಬುದ್ಧದೇವನ ಪರಮ ತ್ಯಾಗವೆ ಮಹಾತ್ಯಾಗ !

ಯಕ್ಷ— ಧನ್ಯಂ ಮಹಾರಾತ್ರಿ !

ಕಿನ್ನರ— ಲೋಕಕಾಗಲಿ ಮೈತ್ರಿ !

(ತೆರಳುತ್ತಾರೆ.)

ಪರದೆ

ಉಷಾ ಪ್ರೆಸ್, ಮೈಸೂರು-೧

ಮಹಾರಾತ್ರಿ

ಪೀಠಿಕಾ ದೃಶ್ಯ

[ಹಿಮಗಿರಿಯ ಮೇಲೆ ಯಕ್ಷ ಕಿನ್ನರರಿಬ್ಬರು ಕಾಣಿಸಿಕೊಂಡು ಬ್ರಹ್ಮಾಂಡವನ್ನು ಸಂಬೋಧಿಸಿ ಡಂಗುರ ಸಾರುತ್ತಾರೆ.]

ಕಿನ್ನರ— ಇದು ಮಹಾರಾತ್ರಿ; ಸಿದ್ಧಾರ್ಥ ಬುದ್ಧನಾ
ಗುವ ರಾತ್ರಿ; ಸಗ್ಗದೊಲವಿಳೆಗಿಳಿವ ರಾತ್ರಿ!

ಯಕ್ಷ— ಜೀವಜ್ಯೋತಿಯದೊಂದು ಧರೆಯ ಮೇಲ್ಬೈತಂದು
ಬುದ್ಧರೂಪದಿ ನಿಂದು ವೈದೋರುವುದು ಇಂದು!

ಕಿನ್ನರ— ವೈರಾಗ್ಯ ಮಾರನಂ ಸೋಲಿಸುವುದಿಂದು!

ಯಕ್ಷ— ಸತ್ಯ ಮಿಥ್ಯೆಯನೊದೆವುದಿಂದು!

ಕಿನ್ನರ— ಭೂರಮೆಯು
ಸ್ವರ್ಗರಮೆಯನ್ನಪ್ಪುವಾ ರಾತ್ರಿ. ಮಂಗಳದ
ಸೊದೆ ಸುರಿವ ರಾತ್ರಿ. ಇದು ಚಿರಸ್ಮರಣೀಯ
ವಾಗಿರುವ ರಾತ್ರಿ.

ಯಕ್ಷ— ನಲಿಯಿರೈ ಅದರಿಂದ
ಉಡುಗಳಿರ! ನಲಿಯೆಲೈ ಹಿಮಕರನೆ! ವಿಶ್ವವೇ
ಸಂತಸದಿ ಹಿಗ್ಗು. ಪೂವಲಿಯ ಚೆಲ್ಲಿರೈ
ದೇವತೆಗಳಿರ ನೀವು. ಜೀವಜಂತುಗಳೆ
ಇಂದು ನಿಮಗಾಗೆದೆಯ ಕೆನ್ನೀರ ಸುರಿವ
ಪುಣ್ಯಾತ್ಮನುದಿಸುವನು!

ಕಿನ್ನರ— ಎಲೆ ತುಹಿನಗಿರಿರಾಜ,
ಶಿರದಿ ನಾಕದ ಭಾರವನು ಹೊತ್ತು, ನೀನಿಂತು
ಧ್ಯಾನದೊಳಗಿದ್ದುದದು, ಬರಿದಾಗಲಿಲ್ಲ!
ನೋಡಲ್ಲಿ! ಬುದ್ಧನಾಗುವನಿಂದು, ಈ ರಾತ್ರಿ,
ಜಾಗಕೆಳಸುತ್ತಿಹನು!

[ಗಂಧರ್ವನೊಬ್ಬನು ಪ್ರವೇಶಿಸುತ್ತಾನೆ]

ಗಂಧರ್ವ –(ಸ್ವಗತ) ಯಾರೊ ಮಾತಾಡಿದುದನಾಲಿಸಿದೆನಲ್ಲವೆ?
ಮೇಣ್ ಬರಿಯ ಭ್ರಾಂತಿಯೋ? (ಸುತ್ತ ನೋಡಿ ಹರ್ಷದಿಂದ)
ಈ ಗಿರಿಯ ಮೇಲಿರುವು
ದೇನತುಳ ಶಾಂತಿ! ಹಿಮಗಿರಿಯ ಗಾಢದಿಂ
ದಪ್ಪಿ, ಮುದ್ದಿಟ್ಟು, ಮಲಗಿರುವ ಕೌಮುದಿಯು,
ತಾಯೆದೆಯ ಪೀಯೂಷ ಪಾನದಿಂದಾನಂದ
ಹೊಂದಿ, ಅರೆಯರಳಿರುವ ಕಣ್ಣಿವೆಯ ಪಿಳಿಪಿಳನೆ
ಬಿಟ್ಟೆದೆಯನಾಲಿಂಗಿಸೊರಗಿರುವ ಶಿಶುವಂತೆ
ರಮಣೀಯವಾಗಿಹುದು! ಶಿವನ ಪಾದವ ಪೂಜೆ
ಮಾಡಲೆಂದೆಳಸಿ, ಪರಮೇಶ ತಮ್ಮೆಡೆಗೆ
ಬಾರದಿರೆ, ತಾವೆ ಕೈಲಾಸಕಡರುತಿಹ
ಬಿಳಿಯ ಬಣ್ಣದ ಮಹಾ ಕಮಲಗಳ ತೆರದಿ,
ಮಂಜುಗಡ್ಡೆಯ ಹೊತ್ತ ಧವಳಗಿರಿ ಶೃಂಗಗಳು
ಮೆರೆದು ಮನಮೋಹಿಸುತ ಮೌನೋಪದೇಶವಂ
ಮಾಡುವಂತೆಸೆದಿಹವು. ಈ ರಾತ್ರಿ, ಈ ಮಹಾ
ಹಿಮಗಿರಿಯ ಶೃಂಗದೊಳು ಯಾರಾದರೇನನ್
ಎಸಗುವರು? ಕಜ್ಜವೇನಿರಬಹುದು? ಹೌದು,
ನಾನಾ ತುಷಾರಾಸನದೊಳೊರಗಿದಾಗಳ್
ಮಂಗಳ ನಿನಾದವೆಂಬಂತೆ, ದೂರದಿಂ
ದಿಂಪಾಗಿ ನಲಿನಲಿದು, ಗಾಳಿಯಲೆಗಳಲಲೆದು
ಧ್ಯಾನದಿಂದೆನ್ನನ್ ಎಚ್ಚರಿಸಲಿಲ್ಲವೆ?

ಯಕ್ಷ— (ಕಾಣಿಸಿಕೊಂಡು)
ಗಂಧರ್ವ, ಸಂತಸದ ಸುದ್ದಿಯೊಂದನು ನೀನು
ಕೇಳಿದೆಯ?

ಗಂಧರ್ವ—(ಹಿಂತಿರುಗಿ ವಿನಯದಿಂದ) ಇಲ್ಲೇನ ಮಾಡುವಿರಿ? ನೀರವದ
ಕಟ್ಟಿರುಳೊಳಿಲ್ಲಿ? ಅಂಬರನಿವಾಸಿಗಳೆ!

ಕಿನ್ನರ— ಎಲೆ ಗೆಳೆಯ, ಮಂಗಳದ ವಾರ್ತೆಯನು ಜಗಕೆಲ್ಲ
ಸಾರುತಿಹೆವು.

ಗಂಧರ್ವ— ಸಂತಸದ ಸಂದೇಶವೇನು ?

ಯಕ್ಷ— ಶಾಕ್ಯರರಸರ ಪುತ್ರ ಸಿದ್ಧಾರ್ಥನೀ ರಾತ್ರಿ
ಬುದ್ಧನಾಗುವನೆಂಬುದೇ ಶುಭದ ವಾರ್ತೆ !

ಗಂಧರ್ವ—ಹಾಗಾದರಿಂದು ಭಾರತಾಂಬೆಯೆ ಧನ್ಯೆ !

ಕಿನ್ನರ— ಅಲ್ಲವೇ, ಗಂಧರ್ವ !

ಯಕ್ಷ— ಯಜ್ಞಯಾಗಾದಿಗಳ
ಹಿಂಸೆಯಲಿ ಬೆಂದು, ಕೃತ್ರಿಮದ ವೈದಿಕರ
ದೌಷ್ಟ್ಯದೊಳು ನೊಂದು, ಒಣವೇದ ಪಂಡಿತರ
ವಾದದೊಳು ಮುಳುಮುಳುಗಿ ಗೋಳಿಡುವ ಭಾರತಿಯ
ಪುಣ್ಯಗಗನದ ಪೂರ್ವದೊಳು, ನೋಡು, ಹರ್ಷದರು-
ಣೋದಯವು ಶೋಭಿಸುವುದೆಂತು !

ಕಿನ್ನರ— ನೋಡದೋ,
ಗಂಧರ್ವ, ಭಾರತಾಂಬೆಯು ತನ್ನ ಪರಮ
ಪುಣ್ಯೋದಯಕೆ ಹಿಗ್ಗಿ ಬಿಡುಗಡೆಯ ನಿಟ್ಟುಸಿರ್
ಬಿಟ್ಟು ನಲಿದಿಹಳು.

ಯಕ್ಷ— ನೋಡಲ್ಲಿ ! ಮುಂದೆ ಬಹ
ಬುದ್ಧನಿಗೆ ಕಾಣಿಕೆಯ ತಂದೊಪ್ಪಿಸಲು ಧರ್ಮ
ದೇವತೆಯು ಬಿಳಿಯ ಸೀರೆಯನುಟ್ಟು, ಅರೆಯರಳಿ
ದಂತಿರುವ ಕಣ್ಬೆಳಕ ಬೀರಿ ಸಡಗರದಿಂದ
ಬರುತಿಹಳು.

ಗಂಧರ್ವ— ನೋಡಿರೆಲೆ ಬಾಂದಳದ ಬಂಧುಗಳೆ,
ಪುಣ್ಯದೇವಿಗೆ ಒದಗಿದೀ ಭಾಗ್ಯವನು ಕರುಬಿ
ಪಾಪ ಮಾರಿಯು ತನ್ನ ದೂತರಾವಳಿಯನ್
ಅಟ್ಟುತಿಹಳಲ್ಲಿ ಗೌತಮನ ಮೋಹಿಸಲು !

ಕಿನ್ನರ— ಗೌತಮಗೆ ಬಂದೊದಗಬಹುದಾದ ಕಷ್ಟಗಳನ್
ಎಲ್ಲ ಪರಿಹರಿಸಲೆಂದೇ ನಾವು ಹೊರಟಿಹೆವು.

ಯಕ್ಷ— ಹಾಗಾದರಿನ್ನೇಕೆ ತಡ ? ಹೊರಡೋಣ
ಬನ್ನಿ.

ಗಂಧರ್ವ—(ಕಿನ್ನರನ ಕಡೆ ದಿಟ್ಟಿಸಿ ನೋಡಿ)
ಕಿನ್ನರಾ, ನಿನ್ನ ಕರತಳದೊಳ್
ಆರಾಜಿಸುವುದೇನು ? ಶಶಿತಾರೆಗಳಿಗೆಲ್ಲ
ಬೆಳಕ ದಯಪಾಲಿಸುತ ರಂಜಿಸುವುದೇನು ?

ಯಕ್ಷ— ಅಧಿಕಾರ ಮಕುಟವದು !

ಕಿನ್ನರ— ಅರಿಯೆಯಾ, ಗಂಧರ್ವ ?
ಅವತಾರಪುರುಷರೀ ಧರೆಯಲ್ಲಿ ಜನ್ಮಿಸಲು
ಜಗದೊಡೆಯನವರಿಗೀ ಅಧಿಕಾರ ಮಕುಟವನು
ಕಳುಹುವನು !

ಯಕ್ಷ— ಜಗಕವರು ತತ್ತ್ವಬೋಧೆಯ ಮಾಡೆ
ಆಣತಿಯನೀಯುವನು ! ಅಧಿಕಾರ ಮಕುಟವಿದು
ಸಾಮಾನ್ಯವಾದುದೆಂದರಿಯದಿರು. ಬಹು ಸಂಖ್ಯೆ
ಅವತಾರಗಳ ಶಿರವ ಸಿಂಗರಿಸಿ ಬಂದಿಹ
ಕಿರೀಟವಿದು. ಪಾವನಕೆ ಪಾವನವ, ಮಂಗಳಕೆ
ಮಂಗಳವನೀವ ತಲೆದೊಡವು ಇದು. ಈ ರಾತ್ರಿ
ಗೌತಮನ ಬುದ್ಧನನ್ನಾಗಿ ಮಾಡುವ ಪುಣ್ಯ
ಮೌಳಿಯಿದು. ಬನ್ನಿ, ಬುದ್ಧನಿಗೆ ನೆರವಾಗಿ
ಧನ್ಯರಾಗುವ ಬನ್ನಿ !

(ತೆರಳುತ್ತಾರೆ.)

ಪರದೆ

ಯಕ್ಷ-

ದೃಶ್ಯ ೧

[ಅರಮನೆಯ ಪಕ್ಕದ ಒಂದು ಉದ್ಯಾನವನದಲ್ಲಿ ಸಿದ್ಧಾರ್ಥನು ತಿರುಗಾಡುತ್ತಿದ್ದಾನೆ.]

ಸಿದ್ಧಾರ್ಥ—ಇಲ್ಲ; ಇನ್ನಿಲ್ಲಿ ಇರಲಾರೆ. ಇರಲಾರೆ!
ಎಳೆಯ ಕರೆಯನು ಕೇಳಿಯೂ ಸುಮ್ಮನಿರಲಾರೆ.
ಆತ್ಮದಾಮಂತ್ರಣವನೋದಿಯೂ ಭೋಗಾಭಿ-
ಲಾಷೆಯಿಂದಿನ್ನು ನಾನಿರಲಾರೆ. ವರಧರ್ಮ
ದೇವತೆಯು ಗುಡಿಗಳಿಂ, ಹೊಲಗಳಿಂ, ವನಗಳಿಂ,
ಸೌಧಸೌಧಂಗಳಿಂ ಕೈಬೀಸಿ ಗೋಳಾಡಿ
ಕರೆವುದನು ಕಂಡೂ ಮೊದ್ದನಾಗಿರಲಾರೆ. (ವಾದ್ಯ.)
ನಾದವೇನಿದು? ವಾದ್ಯಗಳ ನಿನದ! ನನಗರಿಯ
ದಂಥಾವ ಶುಭವಿಂದು ಬಂದಿಹುದು?—ನನಗೇನು?
ದನಿಯ ಬೀರಿರಿ ವಾದ್ಯಗಳಿರ! ನಿಮ್ಮಗಳ
ಭಾಗಕ್ಕೆ ಕಿವುಡನಾಗಿಹೆನಿಂದು. ಇಲ್ಲ; ನಾನ್
ಇರಲಾರೆನಿನ್ನು! ಇಂದಿನಿರುಳನು ಬಿಟ್ಟರೆ
ಎನಗಿನ್ನು ಗತಿಯಿಲ್ಲ. ನಾಳೆ ನಾಳೇ ಎಂದು
ವರ್ಷಗಳ ಕಳೆದಾಯ್ತು! ನಾಳೆ ಎಂದಿಗು ನಾಳೆ!
ಇಂದಿಂದೆ! (ಚನ್ನನು ಓಡುತ್ತಾ ಬರುತ್ತಾನೆ.)

ಚನ್ನ— ಶುಭ ಸುದ್ದಿ! ಶುಭ ಸುದ್ದಿ! ನನ್ನೊಡೆಯ!

(ಸಿದ್ಧಾರ್ಥನು ಗಂಭೀರವಾಗುತ್ತಾನೆ.)

ಏನುದಾಸೀನನಾಗಿಹೆಯಲ್ಲ, ಸಿದ್ಧಾರ್ಥ?

ಸಿದ್ಧಾರ್ಥ—ಏನು ಶುಭ ಸುದ್ದಿ, ಚನ್ನಜ್ಜ? ಮಂಗಳ
ನಿನಾದಗಳು ನಭಕೇರುತಿಹವಲ್ಲ ಏಕೆ?

ಚನ್ನ— ಅದೆ ಶುಭದ ವಾರ್ತೆ,
ಸಿದ್ಧಾರ್ಥ. ನಿನಗೊಂದು ಗಂಡುಶಿಶು ಹುಟ್ಟಿಹುದು!
ಪುಣ್ಯಕುದಿಸುವ ತೆರದಿ ಬಣ್ಣ!

ಸಿದ್ಧಾರ್ಥ—(ಅಂತರ್ಮುಖಿಯಾಗಿ) ಮತ್ತೊಂದು
ಪಾಶ. ಕಬ್ಬಿಣದ ಸರಪಣಿಯ ಬಂಧನ!
ದಿನ ಕಳೆದ ಹಾಗೆಲ್ಲ ಬುವಿಯ ಜಾಲವು ನಮ್ಮ
ಸುತ್ತುವುದೆ ಹೊರತು, ಬಿಗಿಬಿಗಿಯುವುದೆ ಹೊರತು
ಬಿಚ್ಚಿಬಿಡುವುದು ಎಂಬ ನೆಚ್ಚ ನಾ ಕಾಣೆ.

ಚನ್ನ— ಏಕಿಂತು ಮೌನವಾಗಿಹೆ, ಒಡೆಯ?

ಸಿದ್ಧಾರ್ಥ—(ಗಂಭೀರವಾಗಿ) ಸಾರಥಿ,
ಚನ್ನ, ಇತ್ತ ಬಾ, ನನಗಿಂದು ನಿನ್ನ ನೆರ
ವಾಗಲೇಬೇಕು. (ಸಂಗೀತ) ಏನು ಸಂಗೀತವಿದು?

ಚನ್ನ—ಪುತ್ರೋದಯದ ಹರುಷಕಾಗಿ ಅಂಗನೆಯರ್
ಉಲಿಯುವರು ಮಂಗಳದ ಹಾಡುಗಳ. ಕೇಳು,
ಎಷ್ಟು ಮೃದುಮಧುರವಾಗಿಹುದು!

ಸಿದ್ಧಾರ್ಥ—(ಸ್ವಗತ) ಎಲೆ ಗಾನ-
ದೇವತೆಯೆ, ನಿನ್ನ ಮೋಹದ ಮುಡಿಯು ಸಿಡಿದೊಡೆವು
ದಿಂದು! ಆತ್ಮಗೀತವು ಕರ್ಣಗೀತವನು
ಏಳಿಸುತಲಿಹುದಿಂದು. ಅಮೃತ ಪಾನದ ಬಯಕೆ
ನಾಡಹಾಲಿನ ಬಯಕೆಯನ್ನಟ್ಟಿ ಬಟ್ಟಿಹುದು.
(ಗಟ್ಟಿಯಾಗಿ) ಚನ್ನ!

ಚನ್ನ—(ಅನ್ಯಮನಸ್ಕ) ಎಷ್ಟು ಹೃದಯಂಗಮ, ಸಂಗೀತ!
ಏಕೆ, ಸಿದ್ಧಾರ್ಥ, ಗಾನವೆನೆ ತನುಮನಗಳ್
ಎಲ್ಲವನು ಮರೆತು ಕೇಳುತಲಿದ್ದ ನೀನಿಂದು
ಸರಗೈವ ರಮಣಿಯರನಾಲಿಸದೆ, ಚಿಂತಾತ್ಮನ್
ಆಗಿರುವೆಯಲ್ಲ?

ಸಿದ್ಧಾರ್ಥ—(ನಟ್ಟನೋಟದಿಂದ) ಹೌದು, ಚನ್ನ, ಹೌದು!
ಇರಲಿಯದು. ಇತ್ತ ಬಾ. ನನಗಿಂದು ನಿನ್ನ ನೆರ-
ವಾಗಲೇಬೇಕು.

ಚನ್ನ— ಸಾರಥಿಯನೀ ರೀತಿ
ಕೇಳುವರೆ? ಬೆಸಸು, ಕಿಂಕರ ನಾನು.

ಸಿದ್ಧಾರ್ಥ— ಇನ್ನು ನೀನ್
ಎನ್ನ ಸಾರಥಿಯಲ್ಲ.

ಚನ್ನ— (ದೈನ್ಯದಿಂದ) ಕೆಲಸದಿಂ ಬಿಡಿಸುವೆಯ?
ಬೇಡ, ಗೌತಮ, ಬೇಡ. ನಾ ಮುದುಕ, ನಿರ್ಗತಿಕ!
ನಾನೆಸಗಿದಪರಾಧವಾದರೂ ಏನು?
ಮನ್ನಿಸೆನ್ನೊಡೆಯ.

ಸಿದ್ಧಾರ್ಥ—(ಕರುಣೆಯಿಂದ) ಹಾಗಲ್ಲ, ಕೇಳಿಲ್ಲಿ.

ಚನ್ನ— ಇಲ್ಲ, ಬೇಡ! ಬೇಡ! ನಿನ್ನ ಬಿಟ್ಟರೆ ನಾನು
ಸಾಯುವುದೆ ಸರಿ. ಚನ್ನನೆದೆಯಲ್ಲಿ ನೀನಲ್ಲ
ದಿನ್ನಾರು ನೆಲಸಿಲ್ಲ.

ಸಿದ್ಧಾರ್ಥ—(ಸ್ವಗತ) ಪಾಪ, ಮುದುಕನಿವ!
(ಗಟ್ಟಿಯಾಗಿ) ಚನ್ನಜ್ಜ, ಕೇಳಿಲ್ಲಿ, ನಿನ್ನ ನಾ ಬಿಡಲಾರೆ,
ಹೆದರದಿರು.

ಚನ್ನ— (ಸಂತಸದಿಂದ) ನೀನೀಗ ಸಿದ್ಧಾರ್ಥ! ಮತ್ತೇನು?

ಸಿದ್ಧಾರ್ಥ—ಇಂದು ನಾ ಬಹು ದೂರ ಹೋಗಬೇಕೆಂದಿರುವೆ.

ಚನ್ನ— (ಆಶ್ಚರ್ಯದಿಂದ)
ಯಾವೆಡೆಗೆ ಸಿದ್ಧಾರ್ಥ? ಇಂದೇಕೆ? ಮಾತೇನು?
ಮಗನು ಹುಟ್ಟಿದ ದಿನವೆ ತಂದೆ ಹೋದರೆ ದೂರ,
ಲೋಕವೇನೆನ್ನುವುದು?

ಸಿದ್ಧಾರ್ಥ— ಚನ್ನ, ನೀನೆನಗೆ
ಬೇಕಾದವನು, ಕೇಳು. ಇಂದಿನಿರುಳೇ ನಾನು
ತಿರೆಸಿರಿಗಳೆಲ್ಲವನು ಬಿಸುಟು ಮುಕ್ತಿಶ್ರೀ
ಯನ್ನರಸಿ ಹೊರಡುವೆನು.

ಚನ್ನ— ಏಕೆ, ನನ್ನೊಡೆಯ,
ಇಲ್ಲಿ ಸೊಗವಿಲ್ಲವೇ ನಿನಗೆ?

ಸಿದ್ಧಾರ್ಥ—(ವ್ಯಾಕುಲತೆಯಿಂದ) ಚನ್ನಜ್ಜ,
ನಾನೊಬ್ಬ ಸುಖಿಯಾದರೇನಾಯ್ತು? ಲೋಕವೇ
ಬೊಬ್ಬಿರಿಯುತಿಹುದಲ್ಲ ಬೆಂದು ಬಡತನದಲ್ಲಿ.

ಮೌಢ್ಯಾಂಧಕಾರದೊಳು ಸಿಕ್ಕಿ, ದಾರಿಯ ತಪ್ಪಿ,
ಕಾಡುಪಾಲಾಗಿಹಳು ಭಾರತಾಂಬೆಯು, ಚನ್ನ,
ಕಾಡುಪಾಲಾಗಿಹಳು! (ನಿಟ್ಟುಸಿರುಬಿಟ್ಟು)
ಚನ್ನಜ್ಜ, ನಿನಗೆಲ್ಲ
ಬಣ್ಣಿಸಲು ಸಮಯವಿಲ್ಲೀಗ. ನನಗಿಂದು
ನೆರವಾಗುವೆಯ ಹೇಳು.

ಚನ್ನ— ಎದೆಯೇಕೊ ನಡುಗುತಿದೆ,
ಒಡೆಯ. ನೀನೇನು ಮಾಡುವೆಯೊ ನಾನರಿಯೆ.
ನಿನ್ನ ಚಿತ್ತವನರಿಯೆ. ಆದೊಡೆಯು ನಿನ್ನಲ್ಲಿ
ನೆಚ್ಚುಂಟು ಎನಗೆ. ಇಂದು ಹೋದವನೆಂದು
ಹಿಂದಕೈತರುವೆ?

ಸಿದ್ಧಾರ್ಥ— ಎಂದಿಗೋ ನಾನರಿಯೆ,
ಸಾರಥಿ.

ಚನ್ನ— ಒಂದು ವಾರವೆ? ಎರಡೆ? ಮೇಣ್ ಮೂರೆ?

ಸಿದ್ಧಾರ್ಥ—ಅದಕಿಂತ ಹೆಚ್ಚು, ಚನ್ನಜ್ಜ, ಅದಕಿಂತ
ಹೆಚ್ಚು.

ಚನ್ನ— ಹಾಗಾದರೇನೊಂದು ತಿಂಗಳೆ?

ಸಿದ್ಧಾರ್ಥ—(ಮುಗುಳುನಗೆಯಿಂದ) ಅಲ್ಲ, ಚನ್ನ, ಅಲ್ಲ.

ಚನ್ನ— ಒಂದು ಸಂವತ್ಸರವೆ?

ಸಿದ್ಧಾರ್ಥ—ಏನೊ, ನಾನರಿಯೆ.

ಚನ್ನ— ಸಿದ್ಧಾರ್ಥ,
ಏನು ನೀನನ್ನುವುದು! ನಿನ್ನ ಪಯಣದ ಸುದ್ದಿ
ರಾಜರಿಗೆ ಗೊತ್ತೆ?

ಸಿದ್ಧಾರ್ಥ— ಗೊತ್ತಿಲ್ಲ.

ಚನ್ನ— ಹೇಳದೇ
ಕೇಳದೇ ಓಡುವೆಯ? ಹೋಗಿ ತಿಳಿಸಲೆ ನಾನು?

ಮಾರನೊಡ್ಡುವ ಬಲೆಗೆ ಬೀಳದವರಪರೂಪ.
ಒಮ್ಮೆ ತಪ್ಪಿದರೂ ಮಹಾತ್ಮರೇ ಹೌದು.
ಅದರಿಂದ ನೀನೂ ಮಹಾತ್ಮನೇ, ಗೌತಮಾ!
ಧರ್ಮಮೋಕ್ಷವೆ ನೀನು; ನಾನು ಕಾಮಾರ್ಥ!

(ಹೊರಡುತ್ತಾನೆ.)

ಪರದೆ

ದೃಶ್ಯ ೬

[ರಾಜಬೀದಿ, ರಾಲನ ಪ್ರವೇಶ.]

ರಾಲ— (ಆಕಳಿಸಿ ಮೈಮುರಿದು)
ಕಾದು ಕಾದೆನಗೆ ಸಾಕಾಯ್ತು. ಏನು ಚಳಿ !

(ಬಲವಾಗಿ ಕಂಬಳಿ ಹೊದೆಯುತ್ತಾ)

ಆ ಇಲಿ ! ಹಾಳಿಲಿಗೆ ! . . . . ಇಲಿಗಳಿವು ಬಡಜನರ
ಪೀಡಿಸುವುವೇ ಹೊರತು ದೊಡ್ಡವರ ತಂಟೆಗೇ
ಕಾಲಿಡವು. ಏನು ತೂತುಗಳಪ್ಪಾ ! ಏ ಚಳಿ,
ಹಾಳು ಚಳಿ ತೂತಿದ್ದ ಕಡೆಯೇ ನುಗ್ಗುತಿದೆ ! (ಪುನಃ ಆಕಳಿಸಿ)
ಅವನ ಮಾತೇಕೆ ಕೇಳಿದೆನಪ್ಪಾ ; ಈ ಬಂಡಿ
ಹೊಡೆಯುವವರಿಂದ ನಮಗಂತು ಸುಖವಿಲ್ಲ !
ಆ ಚನ್ನಗೇಂ ಮರುಳು ! ಅವನ ಕುದುರೆಯ ತಲೆ
ಅವನಿಗಿಲ್ಲ. ಮೇಣವನ ಬುದ್ಧಿಯೋ ಕಂಥಕನ
ಲದ್ದಿ. ಅರಮನೆಯ ಬಿಟ್ಟಾರು ಹೋಗುವರು ?
ದೊರೆತನವ ಬಿಟ್ಟಾರು ಹೋಗುವರು ? ಕೈಹಿಡಿದ
ಹೆಂಡತಿಯ ಬಿಟ್ಟಾರು ಹೋಗುವರು ? ಹೆತ್ತ
ಮಗನ ಬಿಟ್ಟಾರು ಹೋಗುವರು ? ಏ ಚನ್ನ,
ಬೆಂದ ಹುರಳಿಯ ಬುದ್ಧಿ ನಿನಗಿಲ್ಲ. ಅರುವತ್ತ-
ಕರೆಮರುಳು ! ನಿನಗೀಗ ಎಪ್ಪತ್ತು ! ಅಯ್ಯಯ್ಯೊ
ನಿನ್ನ ಮಾತನು ನಂಬಿ ಬಂದ ನಾನೇ ದೊಡ್ಡ
ಮರುಳು ! (ಕುಣಿಕುಣಿದು)
ಹಾಳಿರುವೆ, ಕಟ್ಟಿರುವೆ, ಕಾಸ್ತಾರ
ನೆಂದು ಕಡಿಯುವೆಯಾ ? (ಕೊಂದು)
ಹೋಗು ಯಮಪುರಿಗೆ !
ಕುಕ್ಕರಿಸಿ ಕುಗುರುವೆನು.

(ಕುಳಿತು ತೂಕಡಿಸುತ್ತಾನೆ. ಸಿದ್ಧಾರ್ಥನು ಬರುತ್ತಾನೆ.)

ಸಿದ್ಧಾರ್ಥ—ಪಾಪ, ಚನ್ನನು ಕಾಯ್ದು ಬಳಲಿದನು. ಹೊತ್ತಾಯ್ತು!
(ಮೇಲೆ ನೋಡಿ)
ಚಂದಿರಗೆ ಮಬ್ಬು ಮುಸುಕಿಹುದಿಂದು. ಕತ್ತಲೆಯೆ,
ಯಾರು ಕಾಣದ ತೆರದಿ ನಿನ್ನಾ ಕರಾಳವಹ
ಸೆರಗಿನಿಂದೆನ್ನಂ ಬಿಗಿಬಿಗಿದು ಸುತ್ತು.

(ಮುಂದೆ ಹೋಗಿ ರಾಲನನ್ನು ಎಡವುತ್ತಾನೆ.)

ರಾಲ— (ಬೆಚ್ಚಿಬಿದ್ದೆದ್ದು) ನನ್ನೊಡೆಯ, ನಾನಲ್ಲ; ಚನ್ನನಾಣತಿಯಂತೆ
ಮಾಡಿದೆನು. ತಪ್ಪಾಯ್ತು! ತಪ್ಪಾಯ್ತು! ತಪ್ಪಾಯ್ತು!

ಸಿದ್ಧಾರ್ಥ—ಯಾರಿವನು? ಪಾಪ! ತಪ್ಪಾಯ್ತು! ಅನಾಥನಿರಬೇಕು.
ಕೂಗದಿರು, ಭಿಕ್ಷುಕ. (ಸ್ವಗತ) ಮೋಕ್ಷವಾಗಲಿ ಮಾಯೆ
ಯರಮನೆಯ ಮೆಟ್ಟಿಲೊಳೆ. (ಗಟ್ಟಿಯಾಗಿ)
ಮನೆಯಿಲ್ಲವೇ ನಿನಗೆ?

ರಾಲ— ಲಾಯದಿಂದೋಡಿಸಿದ, ನನ್ನೊಡೆಯ. ಮಲಗಿದ್ದೆ.
ತಪ್ಪಾಯ್ತು! ದಮ್ಮಯ್ಯ!

ಸಿದ್ಧಾರ್ಥ— ಮಲಗು ನಡೆ, ಹೋಗು.—ಇಗೋ!
(ವಸ್ತ್ರಗಳನ್ನು ಕೊಟ್ಟು ತೆರಳುತ್ತಾನೆ)

ರಾಲ— (ನಿಟ್ಟುಸಿರು ಬಿಟ್ಟು)
ನಿನ್ನ ಮನೆ ಹಾಳಾಗ! ನೀ ಸತ್ತುಹೋಗ!
ಚನ್ನ, ನನ್ನ ಕೆಲಸದ ಬಾಯ್ಗೆ ಮಣ್ಣಾಗು
ತಿತ್ತಲ್ಲ! ಬದುಕಿದೆಯ ಬಡಜೀವ! ಏ ಚನ್ನ,
ನಿನ್ನ ಮನೆ ಹಾಳಾಗ! ನೀ ಸತ್ತೇ ಹೋಗ!

(ಓಡುತ್ತಾನೆ.)

ಪರದೆ

ದೃಶ್ಯ ೭

[ಬೀದಿಯ ಮತ್ತೊಂದು ಭಾಗ. ಇಳಿಬೆಳ್ದಿಂಗಳಲ್ಲಿ ಚನ್ನನು ಹಿಂದೆ ಮುಂದೆ ತಿರುಗುತ್ತಿದಾನೆ.]

ಚನ್ನ— (ದೂರ ನೋಡಿ)

ಕುಣಿಯದಿರು, ಕಂಥಕಾ! ಸಮ್ಮನಿರು, ರಾಹುತಾ!

(ಮತ್ತೆ ಸುತ್ತ ನೋಡಿ)

ಈ ಎಡೆಯೆ ಇರುವಂತೆ ಹೇಳಿದ್ದುದವನು!
ರಾಲನೇನೆಸಗಿದನೊ? ಗುಟ್ಟು ಬಯಲಾಯ್ತೊ?
ಏಕಿನ್ನು ಬರಲಿಲ್ಲ? ಚಂದ್ರನೂ ಶೃಂಗಗಳ
ಚುಂಬಿಸುತ ಮರೆಯಾಗುತಿಹನು. ಇನ್ನೇನು?
ಕಗ್ಗತ್ತಲೆಯೆ ಗತಿ. ಕುಳಿತಿಲ್ಲೆ ಕಾಯುವೆನು.

(ಕುಳಿತುಕೊಳ್ಳುವನು. ಸಿದ್ಧಾರ್ಥನ ಪ್ರವೇಶ.)

ಸಿದ್ಧಾರ್ಥ—ಇಂದುವೂ ಮುಳುಗಿದನು! ಚನ್ನನಿರುವುದನರಿಯೆ.
ಕಾದು ಹಿಂತಿರುಗಿದನೋ ಏನೋ?
ಚನ್ನಜ್ಜಾ, ಚನ್ನಜ್ಜಾ! (ಕೂಗುತ್ತಾನೆ)

ಚನ್ನ— ಸಿದ್ಧಾರ್ಥ!

ಸಿದ್ಧಾರ್ಥ— ಎಲ್ಲಿರುವೆ? ಕಗ್ಗತ್ತಲಿದು ಕಣ್ಣ
ತಿವಿಯುತಿದೆ. ಕಂಥಕನ ತಾ ಬೇಗ, ಹೊತ್ತಾಯ್ತು!

ಚನ್ನ— ಸಿದ್ಧಾರ್ಥ, ಕುದುರೆಗಳ ತಂದಿಹೆನು, ಬಾ ಇಗೋ.

ಸಿದ್ಧಾರ್ಥ—ಕಡಿವಾಣ?

ಚನ್ನ— ಬೇಡವೆಂದೆ, ನೀನೆ.

ಸಿದ್ಧಾರ್ಥ— ಹೌದೌದು!
ಮರೆತಿದ್ದೆ. ಹತ್ತು ರಾಹುತನ, ಚನ್ನಜ್ಜ.
ಹತ್ತಿದೆಯ?

ಚನ್ನ— ಹತ್ತಿದೆನು? ನೀನು?

ಸಿದ್ಧಾರ್ಥ— ಹತ್ತಿದೆ.

(ಕುದುರೆಯನ್ನು ಸಂಬೋಧಿಸಿ ನುಡಿಯುತ್ತದೆ ಆತನ ಅಂತರ್ವಾಣಿ.)

ಮುದ್ದು ಹಯವೇ, ಹೊರಡು; ನಡೆ ಮುಂದೆ, ಮುಂದೆ;
ಜಗದ ಬೆಳಕನು ಹೊತ್ತು ಜವದಿಂದ ನಡೆ ಮುಂದೆ.
ತಿರೆಯ ಕತ್ತಲು ತುಂಬಿ ಕಾಳವಾಗಿರಲು

ನಿಶೆಯ ಗರ್ಭವ ಹೊಕ್ಕು ಜಗಕೆ ಬೆಳಕನು ತಂದೆ
ಎಂಬ ಕೀರ್ತಿಯು ನಿನ್ನದಾಗುವುದು : ಎಲೆ ಹಯವೆ,
ನಡೆ ಮುಂದೆ, ಮುಂದೆ. ಬೇಡ ಭೀತಿಯು ನಿನಗೆ.
ಬೆನ್ನಿನೊಳು ಜಗದ ಜ್ಯೋತಿಯು ಕುಳಿತು ತಳಿಸುತಿದೆ.
ನಿಶೆಯ ಗರ್ಭಂಬೊಕ್ಕು ನಡೆ, ಹಯವೆ, ನಡೆ ಮುಂದೆ
ಮುಂದೆ. ಜೀವಜ್ಯೋತಿಯ ಹೊರುವ ಪುಣ್ಯವೊದ
ಗಿದೆ ಇಂದು. ನೀನೆ ಧನ್ಯನು, ಹಯವೆ : ನೀನಿಂದು
ಇಳೆಯ ತಿಮಿರವ ಹರಿವ ಪೊಂಜುಗಾರನು, ತೇಜಿ.
ಜಗದ ಪುಣ್ಯದ ಭಾರ ನಿನ್ನ ಬೆನ್ನಿನಮೇಲೆ.
ಕೋಟಿ ಜೀವರ ಬಿದಿಯು, ಕೋಟಿಯರಸರ ಬಿದಿಯು,
ನಿನ್ನ ಬೆನ್ನಿನೊಳಿಹುದು. ಓಡು, ನಡೆ; ಓಡು, ನಡೆ ;
ನಡೆ ಮುಂದೆ, ಹರಿಯೆ ! ನಿನ್ನ ನಡೆಯೊಂದರೊಳು,
ಕುಕ್ಕೋಟಿ ಒಂದೊಂದರೊಳಗಿಂದು ಲಕ್ಷಾಂತ
ರಾತ್ಮರಿಗೆ ಸೊದೆಯುಂಟು. ನಿನ್ನಡಿ ಅಂದೊಂದರೊಳು
ತಿರೆಯ ಚರಿತೆಯು ಬಿದ್ದು ಮುಳುಗೆದ್ದು ತೇಲುತಿದೆ.
ಅಮಿತ ಸಂಖ್ಯೆಯ ಜನರ ಪುಣ್ಯ ಭಾರವನಿಂದು
ಹೊತ್ತಿರುವೆ. ಜಗ್ಗದೆಯೆ, ಕುಗ್ಗದೆಯೆ, ನುಗ್ಗಿ ನಡೆ
ಮುಂದೆ. ವಾಜಿಯೇ, ನಡೆ ಮುಂದೆ, ಮುಂದೆ.
ಬಾಳ ಮೋಹವ ಕುಟ್ಟಿ, ದರ್ಪಸಂಪದವಟ್ಟಿ,
ವಿಷಯಸುಖಗಳ ಮೆಟ್ಟಿ, ಸಿರಿಯ ತರಿದಟ್ಟಿ,
ನಡೆ, ಹಯವೆ, ಕಂಥಕನೆ, ನಡೆ ಮುಂದಕೀಗ !
ಎದೆಯ ಕೀಳಾಸೆಗಳನೆಲ್ಲವನು ಸುಟ್ಟು,
ಮನದ ಸಂದೇಹಗಳನೆಲ್ಲವನು ಬಿಟ್ಟು,
ಪರಮಾತ್ಮನಲ್ಲಚಲ ಭಕ್ತಿಯನ್ನಿಟ್ಟು,
ವೈರಾಗ್ಯವನು ತೊಟ್ಟು, ಮುಕ್ತಿಯನ್ನುಟ್ಟು.
ನಡೆ, ಧೀರ ಕಂಥಕನೆ, ನಡೆ ಮುಂದೆ ಮುಂದೆ;
ಓಡು, ನಡೆ; ಓಡು ನಡೆ; ನಡೆ ಮುಂದೆ, ಮುಂದೆ !

(ತೆರಳುತ್ತಾನೆ)

ಪರದೆ

ದೃಶ್ಯ ೮

[ಮೇಘಮಂಡಲದಲ್ಲಿ ಯಕ್ಷ ಕಿನ್ನರ ಗಂಧರ್ವರು ಬರುತ್ತಾರೆ.]

ಯಕ್ಷ— ಚೆಲ್ಲು! ಹೂಗಳ ಚೆಲ್ಲು! ಕಿನ್ನರಾ, ನೋಡಲ್ಲಿ
ಅಲ್ಲಿ! ಅನಿಲವೇಗವ ಮೀರಿ ಓಡುತಿವೆ
ಕುದುರೆಗಳು. ಚೆಲ್ಲು, ಹೂಗಳ ಚೆಲ್ಲು; ಪಥವೆಲ್ಲ
ಮೃದುವಾಗಿ ಖುರಪುಟದ ದನಿಯಾಗದಂತೆ.

ಗಂಧರ್ವ—ಚಿಂತೆಯೋಟವ ಮುಂಚಿ ಸಾಗುತಿವೆ ವಾಜಿಗಳು.

ಕಿನ್ನರ— ಮಿಂಚಿನೋಟವ ನಗುತ ನಗ್ಗುತಿವೆ, ನೋಡು.
ಓಡಿ, ಹಯಗಳೆ, ಓಡಿ. ದೇವದೂತರು ಇಂದು
ನಾವಲ್ಲ, ನೀವು!

ಗಂಧರ್ವ— ಕೆಲಸ ಕೆಟ್ಟಿತು ಈಗ!

ಯಕ್ಷ— ಏನು, ಗಂಧರ್ವ?

ಗಂಧರ್ವ— ನೋಡಲ್ಲಿ, ಗಿರಿಯಂತೆ
ನಿಂತಿಹುದು ಕೋಟೆಗಳ ಹೆಬ್ಬಾಗಿಲು!

ಕಿನ್ನರ— ಇನ್ನಾವ ಹಾದಿಯಿಲ್ಲವೆ, ಯಕ್ಷ?

ಯಕ್ಷ— ನಾನರಿಯೆ!

ಕಿನ್ನರ— ಬನ್ನಿ, ನಾವೆ ತೆರೆಯುವ, ಬನ್ನಿ!

(ತೆರಳುತ್ತಾರೆ.)

ಪರದೆ

ದೃಶ್ಯ ೯

[ಕಪಿಲವಸ್ತುವಿಗೆ ಬಹುದೂರದಲ್ಲಿ. ಕತ್ತಲು. ಚನ್ನ ಸಿದ್ಧಾರ್ಥರು ಕುದುರೆ ಏರಿ ಬರುತ್ತಾರೆ.]

ಚನ್ನ— ಸಿದ್ಧಾರ್ಥ! ಸಿದ್ಧಾರ್ಥ! ಸಾಕಾಯ್ತು, ನನಗೆ!
ತಲೆ ತಿರುಗುತಿದೆ. ಎದೆ ಹಾರುತಿದೆ, ನಿಲ್ಲು.

ಸಿದ್ಧಾರ್ಥ—(ನಿಂತು)ಚನ್ನಜ್ಜ, ಚನ್ನಜ್ಜ, ಏನಾಯ್ತು, ಏನಾಯ್ತು?

ಚನ್ನ— ನನ್ನೊಡೆಯ, ಸ್ವಲ್ಪ ವಿಶ್ರಮಿಸಿ ಹೊರಡೋಣ!
ನೀನು ತರುಣನು, ಒಡೆಯ, ನಾನು ನರೆತವನಪ್ಪಾ!

ಸಿದ್ಧಾರ್ಥ—(ಹತ್ತಿರ ಬಂದು) ಕುದುರೆಯಿಂದಿಳಿ ಕೆಳಗೆ, ಚನ್ನಜ್ಜ!

ಚನ್ನ— (ಇಳಿಯುತ್ತ) ಸಿದ್ಧಾರ್ಥ,
ಏನೋಟವಪ್ಪಾ ಏನೋಟ! ದೇಹವೇ
ನುಗ್ಗುನುರಿಯಾಗುತಿದೆ.

ಸಿದ್ಧಾರ್ಥ—(ತಾನೂ ಇಳಿದು) ಕುಳಿತುಕೊ, ಚನ್ನಜ್ಜ;
ಗಾಳಿಬೀಸುವೆನು. (ಗಾಳಿ ಬೀಸುತ್ತಾನೆ.)

ಚನ್ನ— ಅಪ್ಪಪ್ಪ! ಅಬ್ಬಬ್ಬಾ!

ಸಿದ್ಧಾರ್ಥ—ದೂರವೆನಿತಾಯಿತ್ತಾಗ, ಚನ್ನಜ್ಜ, ಪಟ್ಟಣವ
ಬಿಟ್ಟು?

ಚನ್ನ— ಹದಿನಾರು ಯೋಜನಗಳಾದುವೈ,
ಗೌತಮಾ!

ಸಿದ್ಧಾರ್ಥ— ಈಗ ನಾವೆಲ್ಲಿಹೆವು?

ಚನ್ನ— ಕೋಲಿ ದೇಶವ ದಾಟಿ ಬಂದಿಹೆವು.

ಸಿದ್ಧಾರ್ಥ—ಉದಯುವೆಮ್ಮನು ಅನುವಾ ತರಂಗಿಣಿಯ
ತೀರದಲ್ಲೆದುರುಗೊಳಬೇಕಜ್ಜಾ. ಹೊರಡೋಣ.

ಚನ್ನ— ಗಳಿಗೆಯೊಂದಿಲ್ಲಿದ್ದು ಹೊರಡೋಣ.

ಸಿದ್ಧಾರ್ಥ— ನಿನ್ನಾಸೆ!

ಚನ್ನ— ಮಲಗಿಕೊಳ್ಳುವೆನಯ್ಯ, ಸಿದ್ಧಾರ್ಥ.

ಸಿದ್ಧಾರ್ಥ— ಮಲಗಿಕೋ,
ಚನ್ನಜ್ಜ. (ಚನ್ನನು ಮಲಗಿ ನಿದ್ರಿಸುತ್ತಾನೆ.)
ಮಲಗು, ಮುದುಕಾ, ಮಲಗು.
ನೀನಿನ್ನು ನನ್ನೊಡನೆ ಬರಲಾರೆ. ಹೋಗು,
ಕಪಿಲವಸ್ತುವಿಗೆಲ್ಲ ಸಿದ್ಧಾರ್ಥನೀ ಕತೆಯ
ಹೇಳು. ಶಾಕ್ಯಜನರಿಗೆ ನೃಪನೊರೆ, ಹೋಗು !
ನಾನಿನ್ನು ಲೋಕದ ಮಹಾಂಬುಧಿಗೆ ! ನೀ ಬೀಳ-
ಲಾರೆ ಎನ್ನೊಡನೆ. ನೀನೆನ್ನನಗಲುವುದು
ಬಹು ಕಷ್ಟ. ತಂದೆಯಂತೊಲಿದಿರುವೆ ಎನ್ನ.
ಸರ್ವದಾ ಭಕ್ತಿಯಿಂ ಸೇವಿಸಿದೆ, ಚನ್ನ. (ಕೊಡುತ್ತಾ)
ತೆಗೆದುಕೋ ಈ ನನ್ನ ಒಡವೆಗಳ. ತೆಗೆದುಕೋ
ನಿನಗಾಗಿ ತಂದ ಈ ರನ್ನಗಳ ; ತೆಗೆದುಕೋ
ವಸನಗಳ ; ತೆಗೆದುಕೋ ಈ ಎನ್ನ ಹೃದಯವನು.
ನೀನೇಳುವಲ್ಲಿಪರಿಯಂತ ನಾನಡಗಿ,
ಮೇಲೆ ದಾರಿಯ ಹಿಡಿವೆ. ಎಲ್ಲಕೂ ಮಿಗಿಲಾಗಿ
ನಿನ್ನನೊಲಿದಿದ್ದೆ, ಚನ್ನಜ್ಜಾ. ಸೂತಿಕಾಗೃಹದಿಂದ
ನಾನಿನಿತು ಶೋಕದಿಂ ಪೊರಮಟ್ಟು ಬರಲಿಲ್ಲ.
ಎಂದಾದರೊಂದು ದಿನ ಬಂದು ಕಾಣುವೆ ನಿನ್ನ;
ಹೋಗಿ ಬರುವೆನು, ಚನ್ನ ; ನಿನಗೆ ಮಂಗಳಮಕ್ಕೆ !
(ಕುದುರೆಯೊಡನೆ ಹೊರಡುತ್ತಾನೆ.)

ಚನ್ನ— (ತುಸುಹೊತ್ತಿನಮೇಲೆ ಎದ್ದು)
ಸಿದ್ಧಾರ್ಥ, ಹೊತ್ತಾಯ್ತು, ಹೊರಡೋಣ, ಏಳು ;
ನಿನಗು ನಿದ್ದೆಯೆ, ಒಡೆಯ ? ಸಿದ್ಧಾರ್ಥ, ಸಿದ್ಧಾರ್ಥ !
(ಹುಡುಕಿ)
ಸಿದ್ಧಾರ್ಥ, ಎಲ್ಲಿರುವೆ ? ನನ್ನೊಡೆಯ, ಎಲ್ಲಿರುವೆ ?
ಅರೆದಾರಿಯಲ್ಲೆನ್ನ ಕೊರಳ ಕೊಯ್ಯುವೆಯೇನು ?
ಮಲಗಿದವನನ್ನಿಂತು ಬಿಟ್ಟೋಡುವುದೆ ನೀನು ?
'ನಾನಿನ್ನ ಬಿಡಲಾರೆ' ಎಂದ ನುಡಿ ಏನಾಯ್ತು ?
ಏನು ಮಾಡಲಿ ನಾನು ? ಎತ್ತ ಹೋಗಲಿ ಇನ್ನು ?

ರಾಲ— ಕುದುರೆಗಳು, ಲಾಯಗಳು, ಜೀನುಗಳು,
ಕಡಿವಾಣಗಳನಿನಿತನೊತ್ತಟ್ಟಗಿಟ್ಟು
ಉಳಿದಾವ ಕೆಲಸವನ್ನಾದರೂ ಹೇಳು.

ಚನ್ನ— ದೊಡ್ಡ ಗುಟ್ಟಿದು ನೋಡು. ರಟ್ಟು ಮಾಡಿದರೆ
ತಲೆಹೋಗುವಂತಹುದು.

ರಾಲ— (ದಿಗಿಲು ಬಿದ್ದು) ಹಾಗಾದರದು ಬೇಡ!

ಚನ್ನ— ಒಪ್ಪಿ, ಬೇಡ ಎನ್ನುವಿಯಾ ಈಗ? ಬಾ ಇಲ್ಲಿ! (ಕೈಬೀಸುತ್ತಾನೆ.)
ಸಿದ್ಧಾರ್ಥನಿಂದು ಬಹು ದೂರ ಹೊರಟಿಹನು.

ರಾಲ— ಎಲ್ಲಿಗೆ? ಏತಕ್ಕೆ? ಈ ರಾತ್ರಿ! ಅಬ್ಬಬ್ಬ!

ಚನ್ನ— ಸುಮ್ಮನಿರು, ತೆಪ್ಪಗಿರು! ಎಲ್ಲಿಗೆಂಬುದನರಿಯೆ.
ಇಂದಾತನೇಕೋ ವಿಚಿತ್ರನಾಗಿಹನು.

ರಾಲ— ಅದಕ್ಕೆ ನಾನೇನು ಮಾಡುವುದು?

ಚನ್ನ— ಅರಮನೆಯ
ಪಶ್ಚಿಮ ದ್ವಾರಾಭಿಮುಖವಾದ ಬೀದಿಯೊಳು
ನೀನಡಗಿ, ಸಿದ್ಧಾರ್ಥನಲ್ಲಿಗೈತಂದೊಡನೆ
ಅಬ್ಬರಿಸು!

ರಾಲ— ಬಲು ಒಳ್ಳೆಯುಪದೇಶ, ಚನ್ನಯ್ಯ!
ನನ್ನ ಬೆನ್ನಿನ್ನ ತೊಗಲಿಗೆಲ್ಲಿ ಹೋಗಲಿ ನಾನು
ಆಮೇಲೆ

ಚನ್ನ— ಹೆದರದಿರು; ನೀನು ಬೊಬ್ಬೆಯಿಡು.
ಬಹುಮಾನ ದೊರಕುವುದು ನಿನಗೆ.

ರಾಲ— (ಬೆರಗಾಗಿ) ನೋಡಲ್ಲಿ!

ಚನ್ನ— ಅವನೆ ಬರುತಿಹನು. ಅರುಗಾಗು, ರಾಲ!

(ಚನ್ನ ರಾಲರು ಅರುಗಾಗುತ್ತಾರೆ. ಸಿದ್ಧಾರ್ಥನು ಬರುತ್ತಾನೆ. ಕೈಲಿ ದೀಪ)

ಸಿದ್ಧಾರ್ಥ—ಒಂದೆ ಸಲ, ಒಂದೆಯೊಂದು ಸಲ! ಹೋಗಿ
ಕಣ್ಣಿನಾಸೆಯ ತಣಿಸಿ ದಣಿಸಿ ಬರುವೆ.
ಹೋಗಬೇಕೇಕೆ? ಕಳ್ಳ ಮನವೇ, ನಿನ್ನ

ತಿರುಳ ನಾ ಕಂಡಿಹೆನು. ಆದರೇನೀ ಎದೆಯು
ಶಾಂತವಾಗದು, ಸುಮ್ಮನಿರದಲ್ಲ! ಎಲೆ ಎದೆಯೆ,
ಆಡದಾಟಗಳೆನಿತು ನಿನ್ನುದರದೊಳಗಿಹವು?
ಬೆಳಕ ಕಾಣದೆ ಇರುವ ನುಡಿಗಳೆನಿತಡಗಿಹವು?
ಎನಿತು ಪಿಸುಮಾತುಗಳು ಮಲಗಿಹವು ನಿನ್ನಲ್ಲಿ?
ಒಂದೆ ಸಲ, ಒಂದೆಯೊಂದು ಸಲ? ಹೋಗಿ
ಕಣ್ಣಿನಾಸೆಯ ತಣಿಸಿ ದಣಿಸಿ ಬರುವೆ.
ಮತ್ತೊಂದು ಬಯಸದಿಹ ಕಡೆಯ ಮುತ್ತನು ಕೊಟ್ಟು
ಬರುವೆ. ಒಂದೆ ಸಲ! ಒಂದೆ ಸಲ! ಒಂದೆ ಸಲ!

(ತೆರಳುತ್ತಾನೆ. ಚನ್ನ ರಾಲರು ಹೊರಗೆ ಬರುತ್ತಾರೆ.)

ರಾಲ— ದೊರೆಯ ಮಕ್ಕಳೆ ಇವರು?

ಚನ್ನ— ಹೌದೊ, ಎಲೆ ಮೂಢ.

ರಾಲ— ಇದೇತಕಿಂತಿಹರು?

ಚನ್ನ— ಬಹುದೂರ ಹೋಗುವರು.

ರಾಲ— ಲಾಯದಾಣೆಗೂ, ಚನ್ನ, ಹಣವಂತರಿಗೆ ಹುಚ್ಚು.

ಚನ್ನ— ಇರಲಿ, ನೀ ಓಡು: ನಾ ಹೇಳಿದುದ ಮಾತ್ರ
ಬಿಡದೆ ಮಾಡು.

ರಾಲ— ಹೋಗುವೆನು. ದೇವರೇ! (ತೆರಳುತ್ತಾನೆ.)

ಚನ್ನ— ಉನ್ಮತ್ತನಂತಿಹನು. "ಒಂದೆ ಸಲ!" "ಒಂದೆ ಸಲ!"
ಅದರರ್ಥವೇನೋ ನಾನರಿಯೆ; ನಾನರಿಯೆ.
ನನ್ನ ಕೆಲಸವ ನಾನು ಮಾಡುವೆನು. ಪರಮೇಶ,
ನನ್ನೊಡೆಯನಿಂದು ಹೋಗದ ತೆರದಿ ಮಾಡು.
ಪುಣ್ಯಾತ್ಮನಾತನನು ಕೃಪೆಯಿಂದ ಕಾಪಾಡು!

(ಹೊರಡುತ್ತಾನೆ.)

ಪರದೆ

ದೃಶ್ಯ ೪

[ಹೆರಿಗೆ ಮನೆ. ಯಶೋಧರೆ ಮಂಚದ ಮೇಲೆ ಮಲಗಿದ್ದಾಳೆ. ಶಿಶುವಾದ ರಾಹುಲ ತೊಟ್ಟಿಲಲ್ಲಿ ಇದ್ದಾನೆ. ದೂತಿಯರು ಅಲ್ಲಲ್ಲಿ ಮಲಗಿದ್ದಾರೆ. ಸಿದ್ಧಾರ್ಥನ ಪ್ರವೇಶ. ಕತ್ತಲು, ದೀಪ ಕೈಲಿ.]

ಸಿದ್ಧಾರ್ಥ—ಧೈರ್ಯವೆದೆಯೇ ಧೈರ್ಯ! ವೈರಾಗ್ಯ ದೇವತೆಯೆ,
ಸಲಹೆನ್ನನಿಂದು. ಮೃದುವಾಗು, ಎಲೆ ನೆಲವೆ;
ಜನಿಸಿರುವ ರಾಹುಲನ ಕೆನ್ನೆಯಂದದೊಳೀಗ
ಮಿದುವಾಗು, ಎಲೆ ನೆಲವೆ! ವೈರಾಗ್ಯವಿಡುತಿರುವ
ಹಜ್ಜೆಗಳ ಸಪ್ಪುಳವ ವ್ಯಾಮೋಹವಾಲಿಸದ
ತೆರದಿ; ಭೈರವನ ತಂಬಟೆಯ ರತಿಯಾಲಿಸದ
ತೆರದಿ; ಮುಕ್ತಿದೇವಿಯ ಹೆಜ್ಜೆ ಸಪ್ಪಳವ
ಮಾಯೆಯಾಲಿಸದಂತೆ; ಶಿವನ ವಾಣಿಯ ಮದನ
ಆಲಿಸದ ತೆರದಿ; ಮಿದುವಾಗು, ಎಲೆ ನೆಲವೆ!
(ಹೆಜ್ಜೆಯಿಡುತ್ತಾ)
ಮಿದುವಾಗು! ಮಿದುವಾಗು! ಮಿದುವಾಗು! ಮಿದುವಾಗು!
ಸದ್ದೇನು?

ದೂತಿ—(ಕನವರಿಸಿ) ಎನಿತು ಮುದ್ದಾಗಿರುವೆ, ರಾಹುಲ!

ಸಿದ್ಧಾರ್ಥ—ಕನವರಿಸು, ಕನವರಿಸು, ಎಲೆ ದೂತಿ! ಕನಸಿನೊಳು
ರಾಹುಲನ ಮುದ್ದುಮೋಹವ ಕಂಡು. (ಹುಡುಕುತ್ತಾ)
ಕತ್ತಲೆಯೆ,
ಎಲ್ಲಿ ಬಚ್ಚಿಟ್ಟಿರುವೆ ರಾಹುಲ ಯಶೋಧರೆಯರ?
ಇಲ್ಲಿಲ್ಲ! ರಾಮಿಯಿದು! ಕೃಷ್ಣೆಯಿದು! ಗಂಗೆಯಿದು!
(ಕಂಡು) ಅಲ್ಲಿಹುದು! ಅಲ್ಲಿಹುದು ಎನ್ನ ಮುದ್ದಿನ ಕೆಂಡ!
ಮುಟ್ಟಲಾರೆನು; ಮುಟ್ಟಿದರೆ ಸುಟ್ಟುಬಿಡುವೆ;
ಮುಟ್ಟದಿರಲಾರೆ; ತನುಮನಗಳೆಲ್ಲವನು
ಮೋಹಿಸುವ ಶಾಂತಿಯಿಂದೆಸೆಯುತಿಹೆ, ಎಲೆ ಕೆಂಡ!
ಇಲ್ಲಿಗೇತಕೆ ಬಂದೆ, ಎಲೆ ಹೃದಯ? ಮತ್ತೇಕೆ

ಬೆದರಿ ಹಿಂಜರಿಯುತಿಹೆ. ತೃಪ್ತಿಯಾಯಿತೆ ನಿನಗೆ?
ಇಲ್ಲ, ಇನ್ನೂ ಇಲ್ಲ. ತೃಪ್ತಿಯಾಗುವುದೆಂತು?
(ದೂತಿಯೊಬ್ಬಳು ಮೈಮುರಿಯುವಳು)
ಒತ್ತಿ ಹಿಡಿ, ಎಲೆ ನಿದ್ದೆ, ಒತ್ತಿ ಹಿಡಿ ದೂತಿಯನು.
ಹೊತ್ತಾಯ್ತು, ಹೃದಯವೆ, ಹೊತ್ತಾಯ್ತು; ಬೇಗ!
(ಯಶೋಧರೆಯ ಮಂಚದ ಬಳಿಗೆ ಓಡಿಹೋಗಿ ನಿಂತು)
ಶಾಂತವಾಗೆಲೆ ಎದೆಯೆ! ತಳಮಳಿಸದಿರು ಮನವೆ!
(ತೊಟ್ಟಿಲನು ನೋಡಿ)
ರಾಹುಲಾ! ಎನ್ನ ಬೆಳಕಿನ ಕಿರಣ! ಹೃದಯವೇ
ಮರುಗದಿರು! (ಹಿಂಜರಿದು ಮತ್ತೆ ಮುಂದಕ್ಕೆ ಬಂದು)
ಒಂದು ಮುತ್ತನು ಸೆಳೆದು ತೆರಳುವೆನು,
ತಂದೆಯೊಲಿದೀಯುವಾ ಮುತ್ತಲ್ಲವಿದು, ಕಂದ;
ಸಂನ್ಯಾಸಿಯೀಯುತಿಹೆ ನಿಷ್ಕಾಮ ಚುಂಬನ,
ಪರಮಾತ್ಮನೀಯುತಿಹ ಮಂಗಳದ ಮುತ್ತು!
ಹೊತ್ತಾಯ್ತು. (ಮುದ್ದಿಸಲು ಬಗ್ಗಿ ಮತ್ತೆ ಬೆದರಿ ಏಳುವನು)
ಸದ್ದೇನು? (ಸುತ್ತ ನೋಡಿ) ಕಲ್ಪನೆಯ ಸದ್ದು!
ಏಳದಿರು, ಕೂಗದಿರು, ಅಳಬೇಡ, ರಾಹುಲಾ.
ನಿನ್ನಳುವಿನೊಳು ಮಹಾಶಕ್ತಿಯಿಹುದಿಂದು,
ಲೋಕಕದು ಬುದ್ಧನಂ ಮನಬಂದರೀಯುವುದು,
ಮನಬಾರದಿರಲವನನಿರಗೊಡದೆ ಸೀಯುವುದು!
(ಮುತ್ತಿಟ್ಟು)
ಕಡೆಯ ಮುತ್ತಿದು, ಕಂದ, ನೊದಲ ಮುತ್ತಾದರೂ!
(ಯಶೋಧರೆಯ ಕಡೆಗೆ ತಿರುಗುವನು.)
ನಿದ್ರಿಸು, ಯಶೋಧರಾ, ನಿದ್ರಿಸೆಲೆ ತಾಯಿ;
ಇಂದು ನಾ ನಿನ್ನ ಸುತ, ಪತಿಯಲ್ಲ, ಪತಿಯಲ್ಲ!
ನೀನೆನಗೆ ದೇವತೆ, ನಿನ್ನ ಬಳಿ ಸಾ ಸಾರೆ;
ನಿನ್ನ ನಾನಿನ್ನೊಲಿಯೆ; ಭಕ್ತಿಯಿಂ ಪೂಜಿಸುವೆ.
(ಅಲಿಸುತ್ತಾನೆ.)

ಹಾ ! ಖುರಪುಟಧ್ವನಿ ! ಹೊತ್ತಾಯ್ತು ಹೊತ್ತಾಯ್ತು !
ಬಂದೆ, ಚನ್ನಾ, ಬಂದೆ ! ನಿಮಗೆಲ್ಲ ಮಂಗಳಂ !

(ಬಾಗಿಲ ಬಳಿ ಹೋಗಿ)

ಎಲೆ ನಿದ್ದೆ, ನಿನ್ನುದರವತಿ ಕಪ್ಪು.
ನಿನ್ನ ಬಲೆಗೊಳಗಾದವರೆ ಬೆಪ್ಪು.
ನಿನ್ನ ನಿಂದಿಸುವುದೂ ತಪ್ಪು.
ನೀನೀಗ ಸೂತಿಕಾ ಮಂದಿರವನಗಲಿದರೆ,
ಸಗ್ಗ ಸಿಡಿದೊಡೆಯುವುದು !
ಧರೆಯ ಎದೆ ಬಿರಿಯುವುದು !
ಕಂಬನಿಯ ಪೆರ್ದೊರೆಯೆ ಹರಿಯುವುದು !
ಕತ್ತಲೆಯೆ, ಜಗದ ದುಃಖವನೆಲ್ಲ ನುಂಗು !
ಹೊತ್ತಾಯ್ತು ! (ಹೋಗುತ್ತಾ)
ನಿಮಗೆಲ್ಲ ಮಂಗಳಂ !

(ಹೋಗುತ್ತಾನೆ.)

ಪರದೆ

ದೃಶ್ಯ ೫

[ಅರಮನೆಯ ಹೊರಗಡೆ ಸಿದ್ಧಾರ್ಥನ ಪ್ರವೇಶ.]

ಸಿದ್ಧಾರ್ಥ—ಹನಿಯಿಂದ ಸಾಗರಕೆ ಹಾರೆಲ್ಯೆ ಧೀರಾತ್ಮ!
ಛವಿಯಿಂದ ರವಿಯೊಳೊಂದಾಗೆಲ್ಯೆ ವೀರಾತ್ಮ!
ಅಣುವಿಂದ ವಿಭುವಾಗು ; ಜೀವನಿಂ ದೇವನೊಳ
ಗಾಗು! ನಟ್ಟಿರುಳೆ, ಕಟ್ಟಿರುಳೆ, ಕರೆದುಕೋ
ಎನ್ನ. ಕಪಿಲವಸ್ತುವೆ, ಮಲಗು, ಮಲಗು!
ಚರಮ ವಂದನೆ ನಿನಗೆ. ಅರಮನೆಯೆ, ಮಾಯೆಯಾ
ಸೆರೆಮನೆಯೆ, ಎದೆಯಿಂದ ದೂರ ಸರಿ. ಮಸಣವಾಗು,
ಎಲೆ ಎದೆಯೆ. ಹಳೆಯ ಸಂಸ್ಕಾರಗಳನೆಲ್ಲ
ಭಸ್ಮಮಾಡುವೆನಲ್ಲಿ; ಶಿವನ ಕುಣಿಸುವೆನಲ್ಲಿ!
ತಳತಳನೆ ಪುಡಿಯಾಗಿ, ಮೋಹಬಂಧನಗಳಿರ! (ಬೆಚ್ಚಿ)
ಆದರೇನಿದು ಸದ್ದು! ಯಾರೊ ಬರುವಂತಿಹುದು?

(ಮಾರನು ಬರುತ್ತಾನೆ.)

ನೀನಾರು, ಮಧುರ ರೂಪವೆ?

ಮಾರ— ನಾನು ಮಾರ,
ಸಿದ್ಧಾರ್ಥ, ಮೋಹಿನಿಯ ಹಿರಿಯ ಮಗ. ನಟ್ಟಿರುಳೊಳ್
ಆವೆಡೆಗೆ ಪೊರಮಡುವೆ?

ಸಿದ್ಧಾರ್ಥ— ಬಿತ್ತರದ ಲೋಕಕ್ಕೆ,
ಮಾರ.

ಮಾರ— ಕಪಿಲವಸ್ತುವಿನಗಲ ಸಾಲದೇ
ನಿನಗೆ?

ಸಿದ್ಧಾರ್ಥ— ಸಾಲದೆಲೆ ಮೋಹಿನಿಯ ಮಗನೆ!

ಮಾರ— ಹಾಗಾದರೀ ಧರೆಯ ನಿನಗೀವೆ, ಹಿಂತಿರುಗು,
ಸಿದ್ಧಾರ್ಥ; ಹಿಂತಿರುಗು. ಸರ್ವಸಾಮ್ರಾಜ್ಯಕೆ
ಅಧಿಕಾರಿಯಾಗೆ ಪಟ್ಟಕಟ್ಟುವೆ ನಿನಗೆ.

ಸಿದ್ಧಾರ್ಥ—ಪೊರಮಡುವುದೀ ಭೋಗ ಸಾಮ್ರಾಜ್ಯಕಲ್ಲ,
ಮಾರ, ಮುಕ್ತಿ ಸಾಮ್ರಾಜ್ಯಕ್ಕೆ. ಬ್ರಹ್ಮಾಂಡ
ದಲ್ಲಿರುವ ಪರಮತವು ಪದವಿಗಾಗೆಳಸುತಿಹೆ.
ಸರ್ವಸೃಷ್ಟಿಯ ಹರ್ಷಕಾಗೆಳಸುತಿರುವೆ.
ಸರ್ವಜೀವರ ಶಾಂತಿಗಾಗೆಳಸುತಿರುವೆ.
ನನ್ನ ಮುಕ್ತಿಯನೊಂದ ನಾನೆಂದು ಬಯಸೆ.
ಎಳೆಯೊಳಣುವೊಂದು ಬಂಧನದ ಬಲೆಯೊಳಗೆ
ಸಿಕ್ಕಿ ಗೋಳಿಡುವಲ್ಲಿಪರಿಯಂತ ಮುಕ್ತಿಯಂ
ಬಯಸೆ ನಾ; ಹರ್ಷವಂ ಬಯಸೆ ನಾ; ಶಾಂತಿಯಂ
ಬಯಸೆ ನಾ. ಬರಿದೆ ಮೋಹಿವುದೇಕೆ, ಮಾರ?
ತೊಲಗತ್ತ ತೊಲಗು!

ಮಾರ— ಸಿದ್ಧಾರ್ಥ, ಸ್ವಪ್ನಸ್ಥನ್
ಆಗಿರುವೆ. ಜಾಗ್ರತನ ಮಾತಲ್ಲವೀ ನುಡಿ.
ಬಣಗು ವೇದಾಂತವಿದು. ಜಡರ ಸಿದ್ಧಾಂತವಿದು.
ಮುಕ್ತಿಯೆಂಬುವುದೆಲ್ಲಿ? ಬಡ ಶಾಂತಿಯೆಲ್ಲಿ?
ಮರುಳನಂತಾಡುತಿಹೆ. ಅರಮನೆಯ ಸಿರಿಯ
ತೊರೆದರಸಲುಳಿದ ಸಿರಿ ದೊರಕುವುದೆ? ಹುಸಿಮಾತು.
ಇಹಸುಖವನರಿತಿಹೆವು, ಪರಸುಖವದೆಂತಿಹುದೊ?
ಕರದೊಳಿಹ ರನ್ನವದು ಮಿಗಿಲು ಶರಧಿಯ ಸಿರಿಗೆ!
ಪರಸುಖವ ಪಡೆಯಲೆಂದಿಹಸುಖವ ಬಿಡುವೆಯಾ?
ಜೋಕೆ!

ಸಿದ್ಧಾರ್ಥ— ತೊಲಗತ್ತ! ತೊಲಗತ್ತ, ಮಾರ!
ಯುಕ್ತಿವಚನಗಳಿಂದ ಮರುಳನಾಗುವೆನೆಂದು
ಬಗೆದಿಂತು ಬೋಧಿಪೆಯ? ಯುಕ್ತಿಗಳನೋದಿಹೆನು.
ತರ್ಕ ತಾಂ ಬುದ್ಧಿಯಂ ಮೀರಲರಿಯದು, ಮಾರ!
ಬುದ್ಧಿಯಾಚೆಯ ಮೇಲೆ ಸಿದ್ಧಿಯೂರೆಂದು ತಿಳಿ.

ಮಾರ— ಪ್ರಿಯವಲ್ಲದಿರಬಹುದು ಹಿತವಚನದೌಷಧಿ,
ಸಿದ್ಧಾರ್ಥ. ಆದರೂ ಎಚ್ಚರಿಕೆ! ಎಚ್ಚರಿಕೆ!